ಅಚಲ

ತಿಂಗಳ ಪತ್ರಿಕೆ

ಡಿಸೆಂಬರ್ 2002

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 17 ಸಂಚಿಕೆ : 12

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಬಿ. ಎನ್. ಸುಮಿತ್ರಾಬಾಯಿ

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೆ,

ಕಳೆದ 17 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ

ವಾರ್ಷಿಕ ಚಂದಾ - ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಅಜೀವ ಚಂದಾ - ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

'ಅತ್ಯಾಚಾರಕ್ಕೆ ಗಲ್ಲು ಶಿಕ್ಷೆ' - ಒಂದು ರಾಜಕೀಯ ಗಿಮಿಕ್

ಕಳೆದ ತಿಂಗಳು ದೆಹಲಿಯಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬಳ ಮೇಲೆ ಅತ್ಯಾಚಾರ ನಡೆದ ಘಟನೆ ಸಂಭವಿಸಿದ ನಂತರ ಸಂಸತ್ತಿನಲ್ಲಿ ಗದ್ದಲವೋ ಗದ್ದಲ. ಸಂಸತ್ ಸದಸ್ಯೆಯರು ಹೆಂಗಸರಿಗೆ ಹೆಚ್ಚು ರಕ್ಷಣೆ ಬೇಕೆಂದು, ಕಾನೂನಿನ ತಿದ್ದುಪಡಿಗೆ ಆಗ್ರಹಿಸಿದರು. ಇಂತಹ ಸಂದರ್ಭಗಳಲೆಲ್ಲಾ ನುರಿತ ರಾಜಕಾರಣಿಗಳು ಮಾಡುವಂತೆ ಗೃಹಮಂತ್ರಿಯು ಮತ್ತು ಉಪಪ್ರಧಾನಿಯೂ ಆಗಿರುವ ಲಾಲ್ ಕೃಷ್ಣ ಅಡ್ವಾನಿಯವರು ಸಿದ್ಧ ಪರಿಹಾರ ಸೂತ್ರವೊಂದನ್ನು ಮಂಡಿಸಿಯೇ ಬಿಟ್ಟರು. ''ಮಹಿಳಾ ಸಂಘಟನೆಗಳು ಒಪ್ಪುವುದಾದರೆ ಅತ್ಯಾಚಾರಿಗೆ ಗಲ್ಲು ಶಿಕ್ಷೆಯನ್ನು ಕುರಿತಂತೆ ಯೋಚಿಸಿ ಮಸೂದೆಯನ್ನು ಮಂಡಿಸಲಾಗುವುದು'' ಎಂದು ಬಹು ಔದಾರ್ಯದಿಂದ ಸ್ತ್ರೀಪರಕಾಳಜಿಯನ್ನು ಮೆರೆದರು. ಇನ್ನು ಮುಂದುವರಿದಂತೆ ಕೇಂದ್ರ ರಕ್ಷಣಾ ಮಂತ್ರಿಗಳು ಬೆಂಗಳೂರಿನಲ್ಲಿ ಸಾರ್ವಜನಿಕ ಸಮಾರಂಭವೊಂದರಲ್ಲಿ ಮಾತನಾಡುತ್ತಾ ''ಅತ್ಯಾಚಾರಿಗಳನ್ನು ಗುಂಡಿಟ್ಟು ಕೊಲ್ಲಬೇಕು'' ಎಂದು ತಮ್ಮ ರಕ್ಷಣೆಯ ಸೂತ್ರವನ್ನು ಪ್ರಕಟಿಸಿದರು. ಇವಕ್ಕೆಲ್ಲಾ ಕಲಶವಿಟ್ಟಂತೆ ಇತ್ತೀಚೆಗೆ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ನ್ಯಾಯಮೂರ್ತಿಗಳಾದ ಜಸ್ಟೀಸ್ ಸಲ್ಡಾನಾರವರು 'ಅತ್ಯಾಚಾರಿಗಳನ್ನು ನಿರ್ಲಿಂಗಿಗಳನ್ನಾಗಿ ಮಾಡುವುದೇ ಸರಿಯಾದ ಶಿಕ್ಷೆ' ಎಂದು ತೀರ್ಪುಕೊಟ್ಟರು. ಜವಾಬ್ದಾರಿಯುತವಾದ ಸ್ಥಾನಗಳಲ್ಲಿರುವವರು, ಜನಪ್ರತಿನಿಧಿಗಳು ಆದ ಇವರ ಮಾತುಗಳಲ್ಲೇನಾದರೂ ಹುರುಳಿದೆಯೇ? ಈ ಅವಾಸ್ತವಿಕವಾದ ಮಾತುಗಳು ಬೇಜವಾಬ್ದಾರಿತನವನ್ನೂ, ರಾಜಕೀಯ ಗಿಮಿಕ್‌ನ್ನು ಸೂಚಿಸುತ್ತದೆಯೇ ಹೊರತು ಸ್ತ್ರೀಪರ ಕಾಳಜಿಯನ್ನಲ್ಲ.

ಇಂದು ದೇಶದಲ್ಲಿ ಹೆಣ್ಣಿನ ಸ್ಥಿತಿ ಎಷ್ಟೊಂದು ಶೋಚನೀಯವಾಗಿದೆಯೆಂದರೆ, ಮನೆಯೊಳಗೆ ಸುಭದ್ರವಾಗಿದ್ದೇವೆಂದುಕೊಳ್ಳುವ ಹೆಂಗಸರೂ ಕೂಡ ಅತ್ಯಾಚಾರದಂತಹ ಆಘಾತಗಳಿಂದ ಮುಕ್ತರಾಗಿಲ್ಲ. ಒಂಭತ್ತು ತಿಂಗಳ ಹಿಂದೆ ಗುಜರಾತ್‌ನಲ್ಲಿ ನಡೆದ ಹಿಂಸಾ ಕೃತ್ಯಗಳನ್ನು ನೆನಪಿಸಿಕೊಂಡರೆ ಎಂತಹವರಿಗಾದರೂ ಮೈಝುಮ್ಮೆನಿಸುತ್ತದೆ. ಮನೆಯೊಳಗಿದ್ದ ಹೆಂಗಸರನ್ನು ಬೀದಿಗೆಳೆದು ಸಾರ್ವಜನಿಕವಾಗಿ ಅಪಮಾನ, ಅತ್ಯಾಚಾರ ಮಾಡಿ ಸಾಯಿಸಿದ ಘಟನೆಗಳಲ್ಲಿ ಅತ್ಯಾಚಾರಿಗೆ ಶಿಕ್ಷೆಯಾಗಿದೆಯೇ? ರಾಜಸ್ಥಾನದ ಭಾಂವ್ರಿದೇವಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದ 'ಸಾಮಾಜಿಕ ಗಣ್ಯ'ರಿಗೆ ಶಿಕ್ಷೆಯಾಗಿದೆಯೇ ಎಂಬುದನ್ನು ಕೇಂದ್ರದ ಗೃಹಮಂತ್ರಿ ದೇಶಕ್ಕೆ ತಿಳಿಸಬೇಕು. ದೆಹಲಿಯಲ್ಲಿ ಜನನಿಬಿಡಜಾಗದಲ್ಲಿ ಹಾಡು ಹಗಲಿನಲ್ಲಿ ವಿದ್ಯಾರ್ಥಿನಿಯೊಬ್ಬಳ ಮೇಲೆ ಅತ್ಯಾಚಾರ ನಡೆಯುವುದು ಸಾಧ್ಯವಿದೆಯೆಂದಾದ ಮೇಲೆ ಸರ್ಕಾರವು ಹೆಣ್ಣುಮಕ್ಕಳಿಗೆ ಎಂತಹ ರಕ್ಷಣೆಯನ್ನು ಕೊಟ್ಟೀತು! ಈ ದೇಶದ ಹೆಣ್ಣು ಮಕ್ಕಳಿಗೆ ಮರ್ಯಾದೆಯಿಂದ ಗೌರವಯುತಬಾಳನ್ನು ನಡೆಸುವ ಹಕ್ಕು ಇಲ್ಲವೆಂದ ಮೇಲೆ ಯಾವ ಶಿಕ್ಷೆ ಎಂತಹ ರಕ್ಷಣೆಯನ್ನು ಕೊಟ್ಟೀತು?

ನ್ಯಾಯಾಂಗದ ದೃಷ್ಟಿಯಲ್ಲಿ 'ಶಿಕ್ಷೆ' ವಿಧಿಸುವುದರ ಮೂಲಕ ಪ್ರತಿ ನಾಗರೀಕನಿಗೂ ಸಮಾಜದಲ್ಲಿ ಅತ್ಯಂತ ಹೆಚ್ಚಿನ ಭದ್ರತೆಯನ್ನು ನೀಡಬಹುದು ಹಾಗೂ ಆ ಮೂಲಕ ಪ್ರತಿಯೊಬ್ಬ ನಾಗರೀಕನೂ ಯಾವುದೇ ಅಡೆತಡೆಯಿಲ್ಲದೆ ತನ್ನ ಹಕ್ಕನ್ನು ಅನುಭವಿಸುತ್ತಾ ಕಾನೂನಿನ ಇರುವಿಕೆ, ಅದರ ಅವಶ್ಯಕತೆಯನ್ನು ಮನಗಾಣುತ್ತಾ ಕಾನೂನು ಪರಿಪಾಲನಾ ಮನಸ್ಸನ್ನು ಬೆಳೆಸಿಕೊಳ್ಳುತ್ತಾನೆ ಎಂದು ಭಾವಿಸುತ್ತದೆ. 'ಗಲ್ಲು ಶಿಕ್ಷೆ'ಯು ಅತ್ಯಾಚಾರಿಗೆ ಅಂತಹ ಕೃತ್ಯ ನಡೆಸದಂತಹ ಎಚ್ಚರಿಕೆಯ ಮನೋಭಾವವನ್ನು ಮೂಡಿಸಿ ಜನಸಾಮಾನ್ಯರಿಗೆ ಅಂತಹ ಕೃತ್ಯಗಳು ನಡೆಯುವುದಿಲ್ಲವೆಂಬ ಭರವಸೆ ಹುಟ್ಟಿಸುತ್ತದೆಯೇ ಎಂಬ ಅನುಮಾನಗಳಿಗೆ ನಮಗೆ ದೊರೆಯುವ ಮಾಹಿತಿಗಳು ನಂಬಿಕೆ ಹುಟ್ಟಿಸುವುದಿಲ್ಲ. ಇಂದು ಭಾರತದಲ್ಲಿ 54 ನಿಮಿಷಗಳಿಗೊಮ್ಮೆ ಒಂದು ಹೆಣ್ಣಿನ ಮೇಲೆ ಅತ್ಯಾಚಾರವಾಗುತ್ತದೆ. 2000ನೇ ಇಸವಿಯಲ್ಲಿ ನಡೆದಿರುವ 16,496 ಅತ್ಯಾಚಾರ ಪ್ರಕರಣಗಳಲ್ಲಿ ನ್ಯಾಯಾಲಯದ ಕಟ್ಟೆ ಹತ್ತಿರುವುದು 517 ಪ್ರಕರಣಗಳು ಮಾತ್ರ. ಅದರಲ್ಲಿ ಶಿಕ್ಷೆಗೆ ಗುರಿಯಾಗಿರುವವರು ಕೇವಲ ಶೇಕಡ 5 ಭಾಗ ಮಾತ್ರ.

ಹಾಗಾದರೆ ಸಮಸ್ಯೆಯಿರುವುದು ಎಲ್ಲಿ? ಎಂಬುದನ್ನು ವಿಶ್ಲೇಷಿಸುವ ಮನಸ್ಥಿತಿಯಿಲ್ಲದವರು ಮಾತ್ರ ರಾಜಕೀಯ ಗಿಮಿಕ್‌ಗಳನ್ನು ಮಾಡಲು ಸಾಧ್ಯ. ಅಡ್ವಾಣಿಯವರು 'ಅತ್ಯಾಚಾರಿಗೆ ಗಲ್ಲು ಶಿಕ್ಷೆ'ಯನ್ನು ಸೂಚಿಸಿದ್ದು ಇದೇ ಮೊದಲಲ್ಲ. 1998ರಲ್ಲೂ ಇಂತಹ ಬುದ್ಧಿ ಮತ್ತೆಯನ್ನು ಪ್ರದರ್ಶಿಸಿದ್ದರು! ಇಂದು ಸಮಸ್ಯೆಯಿರುವುದು ಈಗಿರುವ ಕಾನೂನಿನಲ್ಲಿಯೇ. ಕಾನೂನನ್ನು ಜಾರಿಗೊಳಿಸಲು ಬೇಕಾದ ನೈಜ ಕಳಕಳಿಯ ಕೊರತೆಯಲ್ಲಿ, ಅತ್ಯಾಚಾರಕ್ಕೆ ಬಲಿಯಾದವರು ಒಳಪಡಬೇಕಾದ ಕಾನೂನು ವಿಧಿವಿಧಾನಗಳು ಸಂವೇದನಾಶೀಲವಾಗಿಲ್ಲ. ಅತ್ಯಾಚಾರಕ್ಕಿಂತ ಹೆಚ್ಚಿನ ಅಪಮಾನ ಮತ್ತು ನೋವನ್ನು ಈ ಕಾನೂನಿನ ಪ್ರಕ್ರಿಯೆ ಅವಳಿಗೆ ನೀಡಬಲ್ಲುದು. ಈಗಿನ ಕಳಪೆ ಪೋಲೀಸ್ ವ್ಯವಸ್ಥೆಯ ತನಿಖಾ ವೈಖರಿ ನ್ಯಾಯ ದೊರಕಿಸಿಕೊಡಲು ಮುಖ್ಯ ಅಡ್ಡಿಯಾಗಿದೆ. ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ಹೇಳುವಂತೆ 'ಶಿಕ್ಷೆಯ ಗರಿಷ್ಠ ಮಟ್ಟ ಅತ್ಯಾಚಾರವನ್ನು ಕಡಿಮೆ ಮಾಡುವುದಿಲ್ಲ. ಆದರೆ ಶಿಕ್ಷೆಯಾಗುವುದು ಖಂಡಿತ ಎಂದಾದರೆ ಅದೇ ಅತ್ಯಾಚಾರಿಗೆ ಭಯ ಹುಟ್ಟಿಸಬಹುದು ಮತ್ತು ಮಹಿಳೆಯರಿಗೆ ಭರವಸೆ ಹುಟ್ಟಿಸಬಹುದು'. ನಮ್ಮ ನಿಧಾನ ನಡೆಯ ಕಾನೂನು ಕ್ರಮಕ್ಕೂ ಕಾಯಕಲ್ಪವಾಗಿ ಇಂತಹ ಪ್ರಕರಣಗಳಲ್ಲಾದರೂ ನ್ಯಾಯ ಕಾಲಮಿತಿಯಲ್ಲಿ ದೊರಕುವ ವ್ಯವಸ್ಥೆಯಾಗಬೇಕು.

ಭಾವೋದ್ವೇಕದ ಹೇಳಿಕೆಗಳನ್ನು ಕೊಡುವುದನ್ನು ಅಧಿಕಾರದಲ್ಲಿರುವವರು ಮೊದಲು ನಿಲ್ಲಿಸಿ ದೇಶದ ಕಾನೂನು ವ್ಯವಸ್ಥೆಯನ್ನು ಬಲಪಡಿಸುತ್ತ ಗಮನ ಹರಿಸಲಿ. ಭ್ರಷ್ಟವಾದ, ಲಿಂಗ ಸೂಕ್ಷ್ಮತೆಯ 'ಗಂಧವೇ ಇಲ್ಲದ ಪೋಲೀಸ್ ವ್ಯವಸ್ಥೆ ಹೆಣ್ಣಿಗೆ ಗೌರವ ಕೊಡುವುದನ್ನು ಮೊದಲು ಕಲಿಯಲಿ.

- ಎನ್. ಗಾಯತ್ರಿ

ಸುಲ್ತಾನಾಳ ಕನಸು

- *ರೋಕೇಯಾ ಬೇಗಂ*

ಬಂಗಾಲದ ಸ್ತ್ರೀ ಶಿಕ್ಷಣ ಪ್ರವರ್ತಕರಲ್ಲಿ ಒಬ್ಬಳಾದ ಬೇಗಂ ರೋಕೇಯ (1908-1932) ಕವಯಿತ್ರಿಯೂ ಬರಹಗಾರಳೂ ಆಗಿದ್ದಳು. ಅವಳು 1908ರಲ್ಲಿಯೇ ಇಂಗ್ಲೀಷಿನಲ್ಲಿ ರಚಿಸಿದ್ದ Sultana's Dream, ಒಂದು ಕಾಲ್ಪನಿಕ ಕತೆಯಿದು. ಇದನ್ನು ಕನ್ನಡಕ್ಕೆ ಕಲ್ಕತ್ತೆಯ ಶ್ರೀ ಜಿ. ಕುಮಾರಪ್ಪ ಅವರು ಅನುವಾದಿಸಿದ್ದಾರೆ.

ಒಂದು ಸಂಜೆ ನಾನು ನನ್ನ ಬೆಡ್‌ರೂಮಿನ ಆರಾಮ ಕುರ್ಚಿಯಲ್ಲಿ ಒರಗಿ ಕುಳಿತುಕೊಂಡು, ಭಾರತೀಯ ನಾರಿಯ ಬಗ್ಗೆ ಯೋಚಿಸುತ್ತಿದ್ದೆನು. ಹಾಗೆ ಯೋಚಿಸುತ್ತಾ ನಾನು ನಿದ್ದೆಗೆ ಜಾರಿದ್ದೆನೋ, ಇಲ್ಲವೋ ತಿಳಿಯದು. ಆದರೆ ನನಗನ್ನಿಸುವಂತೆ ನಾನು ಎಚ್ಚರವಾಗಿಯೇ ಇದ್ದೆನು. ಆಕಾಶದಲ್ಲಿ ಹಾಲಿನಂತ ಚಂದ್ರನ ಬೆಳಕು ಇರುವುದು ನನಗೆ ಕಾಣುತ್ತಿತ್ತು.

ಇದ್ದಕ್ಕಿದ್ದಂತೆಯೇ ಒಬ್ಬ ಮಹಿಳೆ ನನ್ನ ಎದುರು ಬಂದು ನಿಂತಿದ್ದಳು. ಆಕೆ ಹೇಗೆ ಒಳಗೆ ಬಂದಳು ಎನ್ನುವುದೂ ಸಹ ನನಗೆ ತಿಳಿಯದು. ಆಕೆ ನನ್ನ ಗೆಳತಿ ಸಿಸ್ಟರ್ ಸಾರಾ ಎಂದು ಕೊಂಡೆನು.

''ಗುಡ್ ಮಾರ್ನಿಂಗ್'' ಎಂದಳು ಸಾರಾ.

ನಾನು ಒಳಗೊಳಗೇ ನಕ್ಕೆ. ಏಕೆಂದರೆ ಆಗ ರಾತ್ರಿಯಾಗಿತ್ತು ಆದರೂ ''ಹೇಗಿದ್ದೀಯಾ?'' ಎಂದು ಕುಶಲ ಪ್ರಶ್ನೆ ಮಾಡಿದೆನು.

''ನೀನು ದಯವಿಟ್ಟು ಹೊರಗೆ ಬಂದು ನನ್ನ ತೋಟವನ್ನು ನೋಡುವೆಯೇನು?'' ಎಂದು ಸಾರಾ ಕೇಳಿದಳು.

ನಾನು ಕಿಟಕಿಯಿಂದ ಹೊರಗೆ ನೋಡಿದೆ. ಚಂದ್ರನ ಬೆಳಕು ಎಲ್ಲೆಡೆಯೂ ಹರಡಿತ್ತು. ಹೋಗಲು ಅಡ್ಡಿ ಇಲ್ಲ ಎನ್ನಿಸಿತು. ಆ ಹೊತ್ತಿಗಾಗಲೇ ಆಳುಗಳು ಹೊರಗೆ ಮಲಗಿದ್ದರು. ನಾನು ಸಾರಾಳ ಜೊತೆಯಲ್ಲಿ ಹೊರಟೆ.

ನಾವು ಡಾರ್ಜಿಲಿಂಗಿನಲ್ಲಿದ್ದಾಗ ಸಿಸ್ಟರ್ ಸಾರಾ ಜೊತೆಯಲ್ಲಿ ನಾನು ವಾಕಿಂಗ್ ಹೋಗುತ್ತಿದ್ದೆ. ಎಷ್ಟೋ ಸಾರಿ ಅಲ್ಲಿನ ಬಟಾನಿಕಲ್ ಗಾರ್ಡನ್‌ನಲ್ಲಿ ಆಕೆ ಮತ್ತು ನಾನು ಕೈ-ಕೈ ಹಿಡಿದುಕೊಂಡು ನಡೆಯುತ್ತಾ ಹರಟೆ ಹೊಡೆಯುತ್ತಿದ್ದೆವು. ಬಹುಶಃ ಇಂತಹುದೇ ಒಂದು ಗಾರ್ಡನ್‌ಗೆ ಸಾರಾ ನನ್ನನ್ನು ಕರೆದುಕೊಂಡು ಹೋಗುತ್ತಿರಬಹುದು ಎಂದುಕೊಂಡೆ. ಆದುದರಿಂದ ಹಿಂದೆ ಮುಂದೆ ಯೋಚಿಸದೆ ಆಕೆಯೊಂದಿಗೆ ಹೊರಡಲು ನಾನು ಒಪ್ಪಿಕೊಂಡಿದ್ದೆನು.

ಹೊರಗೆ ಹೆಜ್ಜೆ ಇಡುತ್ತಿರುವಂತೆಯೇ, ನನಗೇ ಅಚ್ಚರಿಯಾಗುವಂತೆ ಆದಾಗಲೇ ಬೆಳಕಾಗಿರುವುದನ್ನು ನಾನು ಗಮನಿಸಿದೆನು. ಇಡೀ ನಗರ ಆಗಲೇ ಎಚ್ಚರಗೊಂಡಿತ್ತು. ಮಾರುಕಟ್ಟೆಯಲ್ಲಿ ಆಗಲೇ ಜನರ ಗದ್ದಲ ಆರಂಭವಾಗಿತ್ತು. ಬೆಳಗಿನ ವೇಳೆಯಲ್ಲಿ ರಸ್ತೆಯಲ್ಲಿ ನಡೆಯಲು ನನಗೆ ಸಂಕೋಚವೆನ್ನಿಸುತ್ತಿತ್ತು. ಆದರೆ ರಸ್ತೆಯಲ್ಲಿ ಯಾರೊಬ್ಬರೂ ಕಾಣಿಸುತ್ತಿರಲಿಲ್ಲ.

ಒಬ್ಬಿಬ್ಬ ದಾರಿಹೋಕರು ನನ್ನನ್ನು ನೋಡುತ್ತಾ ಏನನ್ನೋ ಹೇಳಿದರು. ಆದರೆ ಅವರ ಭಾಷೆ ನನಗೆ ಅರ್ಥವಾಗಲಿಲ್ಲ. ಅವರು ನನ್ನನ್ನು ಕಂಡು ಹಾಸ್ಯ ಮಾಡುತ್ತಿದ್ದಾರೆ ಎಂದು ನಾನಂದುಕೊಂಡೆ. ಅವರು ಏನು ಹೇಳುತ್ತಿದ್ದಾರೆ? ಎಂದು ನಾನು ನನ್ನ ಗೆಳತಿಯನ್ನು ಕೇಳಿದೆ.

''ನೀನು ಒಳ್ಳೆ ಗಂಡಸಿನ ರೀತಿಯಲ್ಲಿ ಇದ್ದೀಯಾ'' ಎಂದು ಅವರು ಮಾತನಾಡಿಕೊಳ್ಳುತ್ತಿದ್ದಾರೆ'' ಎಂದಳು ಸಾರಾ.

''ಗಂಡಸಿನಂತೆ!?'' ಹಾಗೆಂದರೇನು?''

''ಅಂದರೆ ನೀನು ಗಂಡಸರಂತೆ ನಾಚಿಕೆ ಉಳ್ಳವಳು ಮತ್ತು ಅಂಜು ಬುರುಕುಯಾಗಿದ್ದೀಯಾ''

''ಗಂಡಸರಂತೆ ನಾಚಿಕೆ ಉಳ್ಳವಳು ಮತ್ತು ಅಂಜುಬುರುಕಿ'' ಇದು ನಿಜವಾದ ಜೋಕ್.

ಪಕ್ಕನೆ ನಾನು ಸಾರಾಳನ್ನು ಗಮನಿಸಿ ನೋಡಿದೆ. ಆಕೆ ಸಿಸ್ಟರ್ ಸಾರಾ ಆಗಿರದೆ ಬೇರೆ ಯಾರೋ ಆಗಿರುವುದನ್ನು ಕಂಡು ನನಗೆ ಗಲಿಬಿಲಿ ಉಂಟಾಯಿತು.

ನಾನು ಕೈ - ಕೈ ಹಿಡಿದುಕೊಂಡು ನಡೆಯುತ್ತಿರುವುದರಿಂದ ನನ್ನ ಬೆರಳುಗಳು ಸಣ್ಣಗೆ ನಡುಗುತ್ತಿರುವುದನ್ನು ಅವಳು ಗಮನಿಸಿದಳು.

''ಏನು ಸಮಾಚಾರ ಗೆಳತಿ?'' ಆಕೆ ಪ್ರೀತಿಯಿಂದಲೇ ಕೇಳಿದಳು.

''ಯಾವಾಗಲೂ ಬುರ್ಕಾ ಹಾಕಿಕೊಂಡೇ ಇರುತ್ತಿದ್ದ ನನಗೆ ಈ ದಿನ ಬುರ್ಕಾ ಇಲ್ಲದೆ ನಡೆಯುತ್ತಿರುವುದರಿಂದ ಗಲಿಬಿಲಿಯಾಗುತ್ತಿದೆ.

''ಓಹ್! ಇಲ್ಲಿ ಯಾವ ಪುರುಷನೂ ಸಹ ನಿನಗೆ ಎದುರಾಗಲಾರ. ಇಲ್ಲಿ ಬರೀ ಹೆಂಗಸರೇ ಇದ್ದಾರೆ. ಇದು ಪ್ರಮೀಳಾ ರಾಜ್ಯ. ಪುಣ್ಯವೇ ಇಲ್ಲಿ ನಾರಿ ರೂಪದಲ್ಲಿ ಆಳುತ್ತಿದೆ'' ಎಂದಳು ಗೆಳತಿ.

ನಿಧಾನವಾಗಿ ನಾನು ಅಲ್ಲಿನ ದೃಶ್ಯಗಳನ್ನು ಗಮನಿಸತೊಡಗಿದೆನು. ಅಲ್ಲಿ ಎಲ್ಲವೂ ಉನ್ನತ ಮಟ್ಟದ್ದಾಗಿತ್ತು. ಅಲ್ಲಿನ ಹಸಿರು ನೆಲವನ್ನು ನೋಡಿ ಅದು ಮಕಮಲ್ಲಿನ ಕುಷನ್ ಎಂದುಕೊಂಡೆನು. ನಾನು ಮೃದುವಾದ ರತ್ನಗಂಬಳಿಯ ಮೇಲೆ ನಡೆಯುತ್ತಿರುವಂತೆ ನನಗೆ ಭಾಸವಾಗುತ್ತಿತ್ತು.

''ಎಷ್ಟೊಂದು ಸೊಗಸಾಗಿದೆ'' ಎಂದೆ.

''ನಿನಗೆ ಇಷ್ಟ ಆಯಿತೇನು'' ಸಿಸ್ಟರ್ ಸಾರಾ ಕೇಳಿದಳು (ನಾನು ಆಕೆಯನ್ನು ಸಿಸ್ಟರ್ ಸಾರಾ ಎಂದೇ ಕರೆಯುತ್ತಿದ್ದೆನು. ಆಕೆಯೂ ಸಹ ನನ್ನನ್ನು ನನ್ನ ಹೆಸರಿನಿಂದಲೇ ಕರೆಯುತ್ತಿದ್ದಳು)

''ಹೂಂ, ಆದರೆ ಮೃದುವಾದ ಮತ್ತು ಮುದ್ದಾದ ಹೂಗಳ ಮೇಲೆ ನಾನು ನಡೆಯಲಾರೆ'' ನಾನೆಂದೆ.

''ಅರೆ, ಅದರ ಬಗ್ಗೆ ಯೋಚಿಸಬೇಡ. ಸುಲ್ತಾನ್ ಅವು ಬೀದಿ ಬದಿಯ ಹೂಗಳು ನೀನು ನಡೆಯುವುದರಿಂದ ಅವುಗಳಿಗೆ ಏನು ಆಗುವುದಿಲ್ಲ''.

''ಈ ಜಾಗವೆಲ್ಲವೂ ಸುಂದರ ತೋಟದಂತಿದೆ. ನೀನು ಎಲ್ಲ ಗಿಡಗಳನ್ನೂ ಸೊಗಸಾಗಿ ಬೆಳೆಸಿದ್ದೀಯಾ.''

''ನಿನ್ನ ಕಲ್ಕತ್ತಾ ಇದಕ್ಕಿಂತಲೂ ಸುಂದರವಾದ ಉದ್ಯಾನವಾಗಬಹುದಿತ್ತು. ಆದರೆ ನಿನ್ನ ಜನರು ಮನಸ್ಸು ಮಾಡಬೇಕಷ್ಟೆ''.

''ಉದ್ಯಾನ ಮಾಡಲು ಅಷ್ಟೆಲ್ಲ ತಲೆಕೆಡಿಸಿಕೊಳ್ಳಲು ಅವರಿಗೆ ಇಷ್ಟವಿಲ್ಲ. ಅವರಿಗೆ ಮಾಡಲು ಬೇರೆ ಸಾಕಷ್ಟು ಕೆಲಸಗಳಿವೆ''.

''ಹೌದು. ಇದಕ್ಕಿಂತಲೂ ಒಳ್ಳೆಯ ನೆಪವನ್ನು ಅವರು ಹುಡುಕಲು ಸಾಧ್ಯವಿಲ್ಲ''.

''ಆ ರಸ್ತೆಯಲ್ಲಿ ನಡೆಯುತ್ತಾ ನಾನು ನೂರಾರು ಹೆಂಗಸರನ್ನು ನೋಡಿದ್ದೆನು. ಆದರೆ ಒಬ್ಬ ಪುರುಷನೂ ಸಹ ಕಣ್ಣಿಗೆ ಬಿದ್ದಿರಲಿಲ್ಲ. ಪುರುಷರೆಲ್ಲ ಎಲ್ಲಿ ಎಂದು ಕೇಳಲು ಮನಸ್ಸು ಚಡಪಡಿಸುತ್ತಿತ್ತು.

''ಗಂಡಸರೆಲ್ಲ ಎಲ್ಲಿದ್ದಾರೆ?'' ನಾನು ಕೇಳಿಯೇ ಬಿಟ್ಟೆ.

''ಅವರೆಲ್ಲ ಎಲ್ಲಿರಬೇಕೋ, ಅಲ್ಲಿದ್ದಾರೆ''.

''ಎಲ್ಲಿರಬೇಕೋ ಅಲ್ಲಿ!? - ಅಂದರೆ?''

''ಓಹ್, ನೀನೆಂದೂ ನಮ್ಮ ನೆಲದ ಮೇಲೆ ಕಾಲಿರಿಸಿಲ್ಲ ಅಲ್ಲವೇ? ಹೀಗಾಗಿಯೇ ನಿನಗೆ ನಮ್ಮ ಪದ್ಧತಿ ತಿಳಿಯದು. ಪುರುಷರೆಲ್ಲ ಮನೆಯ ಒಳಗಿದ್ದಾರೆ.''

''ಅಂದರೆ ಗಂಡಸರು ನಮ್ಮನ್ನು ಜನಾನಾದಲ್ಲಿ ಇರಿಸುವಂತೆ.''

''ಹೌದು ಹಾಗೇನೇ''

''ಎಂತಹ ಮಜಾ'' ಎಂದು ನಾನು ಗೊಳ್ಳನೆ ನಕ್ಕೆ. ಸಿಸ್ಟರ್ ಸಾರಾ ಸಹ ನನ್ನ ಜೊತೆ ನಕ್ಕಳು.

''ಆದರೆ ಸುಲ್ತಾನಾ, ಏನು ತೊಂದರೆ ಮಾಡದ ಈ ಹೆಂಗಸರನ್ನು ಮನೆಯ ಒಳಗಿರಿಸಿ, ಗಂಡಸರನ್ನು ಹೊರಗೆ ಬಿಡುವುದು ಅನ್ಯಾಯವಲ್ಲವೇನು?''

''ಹಾಗೇನೂ ಇಲ್ಲ, ನಾವು ಸಹಜವಾಗಿಯೇ ದುರ್ಬಲರು. ಹೀಗಾಗಿ ನಾವು ಹೊರಗೆ ಬರದೇ ಇರುವುದು ಒಳ್ಳೆಯದಲ್ಲವೆ?''

''ಹೌದು. ಪುರುಷರು ರಸ್ತೆಯಲ್ಲಿ ಇರುವವರೆಗೆ ಹೆಂಗಸರು ಸುರಕ್ಷಿತರಲ್ಲ. ಅದು ಹಿಂಸ್ರ ಪ್ರಾಣಿಯೊಂದು ಮಾರುಕಟ್ಟೆಯ ಒಳಗೆ ಬಂದಂತೆ ಆಗುತ್ತದೆ''.

''ಹಾಗೇನೆ''.

''ಅದು ಸರಿ. ಒಬ್ಬ ಹುಚ್ಚ ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದು ರಸ್ತೆಯಲ್ಲಿನ ಜನ, ಕುದುರೆ ಮತ್ತು ಇತರ ಪ್ರಾಣಿಗಳಿಗೆ ತೊಂದರೆ ಮಾಡತೊಡಗಿದ್ದರೆ ನಿಮ್ಮ ಜನರು ಏನು ಮಾಡುತ್ತಾರೆ?''

''ಆ ಹುಚ್ಚನನ್ನು ಹಿಡಿದು ಮತ್ತೆ ಹುಚ್ಚಾಸ್ಪತ್ರೆಗೆ ಸೇರಿಸಲು ಪ್ರಯತ್ನಿಸುತ್ತಾರೆ''.

''ಹೌದಲ್ಲವೆ? ಹಾಗೆಯೇ, ಆ ಹುಚ್ಚನನ್ನು ರಸ್ತೆಯಲ್ಲಿ ಬಿಟ್ಟು ರಸ್ತೆಯಲ್ಲಿದ್ದ ಜನರೆಲ್ಲರನ್ನೂ ಹುಚ್ಚಾಸ್ಪತ್ರೆಗೆ ಸೇರಿಸುವುದು ಪೆದ್ದುತನವಲ್ಲವೆ?''

''ಹೌದು,'' ನಾನು ನಗುತ್ತಲೇ ಹೇಳಿದೆ.

''ಆದರೆ, ನಿನ್ನ ದೇಶದಲ್ಲಿ ಇದೇ ರೀತಿ ಆಗಿದೆ! ಕಿಡಿಗೇಡಿತನ ಮಾಡುವ ಅಥವಾ ಕಿಡಿಗೇಡಿತನ ಮಾಡುವ ಶಕ್ತಿ ಇರುವ ಗಂಡಸರನ್ನು ರಸ್ತೆಯಲ್ಲಿ ಬಿಟ್ಟಿದ್ದಾರೆ ಮತ್ತು ಪಾಪದ ಹೆಂಗಸರು ಜನಾನಾದಲ್ಲಿ ಸೇರಿಕೊಂಡಿದ್ದಾರೆ. ರಸ್ತೆಯಲ್ಲಿ ಇರುವ ಗಂಡಸರನ್ನು ನೀನು ಹೇಗೆ ನಂಬುತ್ತೀಯಾ?''

''ನಮ್ಮ ಸಾಮಾಜಿಕ ಪದ್ಧತಿಗಳನ್ನು ನಿರ್ಧರಿಸುವಲ್ಲಿ ನಮಗೆ ಯಾವುದೇ ಅಧಿಕಾರವಿಲ್ಲ. ನಮ್ಮ ಭಾರತದಲ್ಲಿ ಪುರುಷನೇ ಒಡೆಯ. ಎಲ್ಲ ಅಧಿಕಾರಗಳನ್ನು ಅವನು ತನ್ನಲ್ಲಿಯೇ ಇರಿಸಿಕೊಂಡಿದ್ದಾನೆ ಮತ್ತು ನಮ್ಮನ್ನು ಜನಾನಾದಲ್ಲಿ ಕೂಡಿಹಾಕಿದ್ದಾನೆ.''

''ಹೀಗೆ ಕೂಡಿ ಹಾಕಿಸಿಕೊಳ್ಳಲು ನೀವು ಏಕೆ ಒಪ್ಪಿಕೊಂಡಿರಿ''

''ಏಕೆಂದರೆ ಅವರು ಮಹಿಳೆಯರಿಗಿಂತಲೂ ಹೆಚ್ಚು ಶಕ್ತಿಶಾಲಿಗಳು''.

''ಸಿಂಹ ಗಂಡಸರಿಗಿಂತಲೂ ಹೆಚ್ಚು ಶಕ್ತಿ ಶಾಲಿಯಾದುದು. ಆದರೂ ಅದು ಮಾನವ ಜನಾಂಗಕ್ಕೆ ಮೇಲುಗೈಯಾಗಲಾರದು. ನೀವು ನಿಮ್ಮ ಅಧಿಕಾರ ಮತ್ತು ಆಸಕ್ತಿಗಳ ಬಗ್ಗೆ ನಿರ್ಲಕ್ಷ್ಯ ತೋರಿಸಿದ್ದೀರಿ. ಇದರಿಂದ ನೀವು ನಿಮ್ಮ ಜನ್ಮ ಬದ್ದ ಹಕ್ಕುಗಳಿಂದ ವಂಚಿತರಾಗಿದ್ದೀರಿ''.

''ಆದರೆ, ಸಿಸ್ಟರ್ ಸಾರಾ, ಎಲ್ಲ ಕೆಲಸಗಳನ್ನು ನಾವೇ ಮಾಡುವುದಾದರೆ ಗಂಡಸರೇನು ಮಾಡುತ್ತಾರೆ?''

''ಅವರೇನೂ ಮಾಡಬೇಕಾಗಿಲ್ಲ. ಅವರೆಲ್ಲ ಕೆಲಸಕ್ಕೆ ಬಾರದ

ನಿಷ್ಪ್ರಯೋಜಕರು. ಸುಮ್ಮನೆ ಅವರನ್ನೆಲ್ಲ ಹಿಡಿದು ಜನಾನಾದೊಳಕ್ಕೆ ತಳ್ಳು".

"ಆದರೆ ಅವರನ್ನು ಹಿಡಿದು ನಾಲ್ಕು ಗೋಡೆಗಳ ಮಧ್ಯೆ ಬಂದಿಸಿ ಇಡುವುದು ಅಷ್ಟು ಸುಲಭವೇನು? ಹಾಗೊಂದು ಪಕ್ಷ ನಾವು ಹಾಗೆ ಮಾಡಿದರೆ ನಮ್ಮ ವ್ಯಾಪಾರ - ವಹಿವಾಟು ರಾಜಕೀಯ ಎಲ್ಲವೂ ಅವರೊಂದಿಗೆ ಜನಾನಾ ಸೇರುವುದಿಲ್ಲವೇನು?" ನಾನು ಕೇಳಿದೆ.

ಸಿಸ್ಟರ್ ಸಾರಾ ಇದಕ್ಕೆ ಯಾವ ಉತ್ತರವನ್ನೂ ನೀಡಲಿಲ್ಲ. ಬದಲಾಗಿ ಮುದ್ದಾಗಿ ನಕ್ಕಳು. ಬಹುಶಃ ಕೂಪಮಂಡೂಕದಂತೆ ಇರುವ ಮಹಿಳೆಯೊಬ್ಬಳೊಡನೆ ಆಕೆ ಏನನ್ನೂ ಮಾತನಾಡಲು ಇಷ್ಟಪಟ್ಟಿರಲಿಲ್ಲ.

ಆ ಹೊತ್ತಿಗಾಗಲೇ ನಾವು ಸಿಸ್ಟರ್ ಸಾರಾಳ ಮನೆಯ ಬಳಿಗೆ ಬಂದಿದ್ದೆವು. ಆ ಮನೆ ಇದ್ದದ್ದು ಹೃದಯಾಕಾರಾದ ಸುಂದರವಾದ ಉದ್ಯಾನದ ನಡುವೆ. ಆ ಮನೆಗೆ ತಗಡಿನ ಛಾವಣಿ ಇತ್ತು. ಆದರೂ ಮನೆಯ ಒಳಭಾಗ ತಂಪಾಗಿತ್ತು. ಮನೆಯನ್ನು ಸುಂದರವಾಗಿ ಅಲಂಕರಿಸಲಾಗಿತ್ತು. ಪೀಠೋಪಕರಣಗಳನ್ನು ಅಂದವಾಗಿ ಜೋಡಿಸಲಾಗಿತ್ತು.

ನಾವು ಅಕ್ಕಪಕ್ಕದಲ್ಲಿ ಕುಳಿತುಕೊಂಡೆವು. ರೇಷ್ಮೆಯ ಬಟ್ಟೆಯನ್ನು ತೆಗೆದುಕೊಂಡು ಆಕೆ ಕಸೂತಿ ಹಾಕಲಾರಂಭಿಸಿದಳು.

"ನಿನಗೆ ಕಸೂತಿ ಬರುತ್ತದೆಯೇನು?" ಎಂದು ಆಕೆ ಕೇಳಿದಳು.

"ಹೂಂ, ಬರುತ್ತದೆ. ಜನಾನಾದಲ್ಲಿ ನಮಗೆ ಬೇರೆ ಯಾವ ಕೆಲಸವೂ ಇಲ್ಲ ತಾನೆ?" ಎಂದೆ.

"ಆದರೆ ನಾವು ನಮ್ಮ ಜನಾನಾದಲ್ಲಿರುವವರ ಮೇಲೆ ನಂಬಿಕೆ ಇಟ್ಟಿಲ್ಲ" ಎಂದಳು ಆಕೆ ನಗುತ್ತಾ "ಏಕೆಂದರೆ ಗಂಡಸರಿಗೆ ಸೂಜಿಯೊಳಕ್ಕೆ ದಾರ ಪೋಣಿಸುವಷ್ಟೂ ತಾಳ್ಮೆ ಇರುವುದಿಲ್ಲ" ಎಂದೂ ಸೇರಿಸಿದಳು.

"ಇದೆಲ್ಲ ಕೆಲಸವನ್ನು ನೀನೇ ಮಾಡಿದ್ದೀಯೇನು?" ಟೀಪಾಯ್ ಮೇಲಿದ್ದ ಕಸೂತಿ ಕೆಲಸವನ್ನೂ ತೋರಿಸುತ್ತಾ ಕೇಳಿದೆ.

"ಹೂಂ"

"ನೀನು ಆಫೀಸಿನಲ್ಲಿಯೂ ಕೆಲಸ ಮಾಡಬೇಕು ಇದೆಲ್ಲ ಮಾಡಿಯೂ ನಿನಗೆ ಇಷ್ಟೆಲ್ಲ ಕೆಲಸ ಮಾಡಲು ಸಮಯ ಹೇಗೆ ಸಿಗುತ್ತದೆ.?"

ಬರೀ ಎರಡು ಗಂಟೆಗಳಲ್ಲಿ ನನ್ನ ಎಲ್ಲ ಕೆಲಸ ಮುಗಿಸಿಕೊಳ್ಳುತ್ತೇನೆ. ಉಳಿದಂತೆ ಇಡೀ ದಿನ ನಾನು ಲ್ಯಾಬೋರೇಟರಿಯಲ್ಲಿ ಕೆಲಸ ಮಾಡುತ್ತೇನೆ.

"ಎರಡೂ ಗಂಟೆಗಳಲ್ಲಿ? ಇದು ಹೇಗೆ ಸಾಧ್ಯ. ನಮ್ಮಲ್ಲಿ ದಿನಕ್ಕೆ ಏಳು ಗಂಟೆಗಳವರೆಗೆ ಆಫೀಸುಗಳಲ್ಲಿ, ನ್ಯಾಯಾಲಯಗಳಲ್ಲಿ ಗಂಡಸರು ಕೆಲಸ ಮಾಡುತ್ತಾರೆ"

"ಅವರು ಕೆಲಸ ಮಾಡುವುದನ್ನು ನಾನೂ ನೋಡಿದ್ದೇನೆ. ಅವರು ನಿಜಕ್ಕೂ ದಿನಕ್ಕೆ ಏಳು ಗಂಟೆ ಕೆಲಸ ಮಾಡುತ್ತಾರೇನು?"

"ಹೂಂ ಪೂರ್ತಿ ಏಳುಗಂಟೆ ಕೆಲಸ ಮಾಡುತ್ತಾರೆ."

"ಇಲ್ಲ ಸುಲ್ತಾನಾ ಅವರು ಏಳು ಗಂಟೆ ಕೆಲಸ ಮಾಡುವುದಿಲ್ಲ. ಬೀಡಿ ಸಿಗರೇಟು ಸೇದುತ್ತಾ ಅವರು ಕಾಲ ಕಳೆಯುತ್ತಾರೆ. ತಮ್ಮ ಕೆಲಸದ ಬಗ್ಗೆ ಹೆಚ್ಚು ಮಾತನಾಡುತ್ತಾರೆ ಮಾತ್ರ. ಆದರೆ ಕೆಲಸ ಮಾತ್ರ ಮಾಡುವುದು ಕಡಿಮೆಯೇ. ಒಂದು ಚೂರುಟನ್ನು ಸೇದಲು ಅರ್ಧಗಂಟೆ ಬೇಕು ಎಂದಿಟ್ಟುಕೋ. ಒಬ್ಬ ಗಂಡಸು ದಿನಕ್ಕೆ ಹನ್ನೆರಡು ಚುರುಟುಗಳನ್ನು ಸೇದುತ್ತಾನೆ. ಹಾಗಾದರೆ ಅವನು ದಿನಕ್ಕೆ ಎಷ್ಟು ಗಂಟೆಗಳ ಕೆಲಸ ಮಾಡುತ್ತಾನೆ ಎನ್ನುವುದನ್ನೂ ನೀನೇ ಲೆಕ್ಕ ಹಾಕಿಕೋ".

"ಹೀಗೆ ಮಾತು ಎತ್ತೆತ್ತಲೋ ಸಾಗುತ್ತಿತ್ತು".

"ಅವರು ಯಾವುದೇ ಸಾಂಕ್ರಾಮಿಕ ರೋಗಗಳಿಂದ ನರಳುವುದಿಲ್ಲ; ಅಷ್ಟೆ ಏಕೆ ಅವರು ನಮ್ಮಂತೆ ಸೊಳ್ಳೆಗಳಿಂದ ಕಚ್ಚಿಸಿಕೊಳ್ಳುವುದಿಲ್ಲ. ಅಪರೂಪಕ್ಕೆ ಒಮ್ಮೊಮ್ಮೆ ಅವರು ಅಪಘಾತಗಳಿಂದಲ್ಲದೆ, ಚಿಕ್ಕವಯಸ್ಸಿನಲ್ಲಿ ಸಾಯುವುದಿಲ್ಲ ಎನ್ನುವ ವಿಷಯಗಳನ್ನೂ ನಾನು ಅವಳಿಂದ ತಿಳಿದುಕೊಂಡೆ.

"ನಮ್ಮ ಅಡುಗೆ ಮನೆ ನೋಡುತ್ತೀಯೇನು?"

ಖುಷಿಯಿಂದ "ಹೂಂ" ಎಂದೆ. ಇಬ್ಬರೂ ಅಡುಗೆಯ ಮನೆಯ ಕಡೆಗೆ ಹೆಜ್ಜೆ ಹಾಕಿದೆವು. ನಮ್ಮ ದಾರಿಯಿಂದ ದೂರ ಹೋಗುವಂತೆ ಆಗಲೇ ಗಂಡಸರಿಗೆ ಸೂಚಿಸಲಾಗಿತ್ತು. ತರಕಾರಿಯ ಕೈತೋಟದಲ್ಲಿ ಅವರ ಅಡುಗೆ ಮನೆ ಇತ್ತು. ಅಡುಗೆ ಮನೆಯಲ್ಲಿ ಹೊಗೆ ಇರಲಿಲ್ಲ. ಅದು ಶುಭ್ರವಾಗಿತ್ತು. ಸಾಕಷ್ಟು ಗಾಳಿ - ಬೆಳಕು ಅಲ್ಲಿತ್ತು. ಕಿಟಕಿಗಳಲ್ಲಿ ಹೂಗಳನ್ನು ಇರಿಸಲಾಗಿತ್ತು. ಎಲ್ಲೂ ಕಲ್ಲಿದ್ದಲಾಗಲಿ, ಬೆಂಕಿಯಾಗಲಿ ಕಾಣಿಸಲಿಲ್ಲ.

"ನೀವು ಹೇಗೆ ಅಡುಗೆ ಮಾಡುತ್ತೀರಿ?" ನಾನು ಕೇಳಿದೆ. "ಸೂರ್ಯನ ಶಾಖದಿಂದ ಎನ್ನುತ್ತಾ ಒಂದು ಪೈಪ್‌ಅನ್ನು ತೋರಿಸಿದಳು. ಆ ಪೈಪಿನ ಮೂಲಕ ಸೂರ್ಯನ ಕಿರಣಗಳ ಸಾಂದ್ರೀಕೃತ ಶಕ್ತಿ ಬರುತ್ತಿತ್ತು. ಅದನ್ನು ತೋರಿಸಲು ಆಕೆ ಯಾವುದೋ ತಿಂಡಿಯನ್ನು ಮಾಡಿದಳು.

"ಸೂರ್ಯನ ಶಕ್ತಿಯನ್ನೂ ನೀವು ಹೇಗೆ ಸಂಗ್ರಹಿಸಿ ಇಟ್ಟುಕೊಳ್ಳುತ್ತೀರಿ?" ನಾನು ಕೇಳಿದೆ.

"ಅದಕ್ಕೂ ಮೊದಲು ನಮ್ಮ ಇತಿಹಾಸವನ್ನಿಷ್ಟು ಹೇಳುತ್ತೇನೆ. ಮುವತ್ತು ವರ್ಷಗಳ ಹಿಂದೆ ನಮ್ಮ ರಾಣಿ ಪಟ್ಟಕ್ಕೆ ಬಂದರು. ಆದರೆ ಆಗ ಅವರ ವಯಸ್ಸು ಕೇವಲ ಹದಿಮೂರು ವರ್ಷ ಮಾತ್ರವಾಗಿತ್ತು. ಹೀಗಾಗಿ ಅವರು ಹೆಸರಿಗಷ್ಟೇ ರಾಣಿಯಾಗಿದ್ದರು. ಆದರೆ ದೇಶವನ್ನು ಆಳುತ್ತಿದ್ದುದು ಪ್ರಧಾನಮಂತ್ರಿಯೇ. ನಮ್ಮ ಪುಟ್ಟರಾಣಿಗೆ ವಿಜ್ಞಾನ್ನ ಎಂದರೆ ಬಹಳ ಪ್ರೀತಿ. ಆದುದರಿಂದ

ದೇಶದ ಎಲ್ಲ ಮಕ್ಕಳಿಗೂ ಶಿಕ್ಷಣ ನೀಡಬೇಕೆಂದು ಅವರು ಆಜ್ಞೆ ಮಾಡಿದ್ದರು. ಹೀಗಾಗಿ, ಸರಕಾರವು ಮಹಿಳೆಯರಿಗಾಗಿ ಅನೇಕ ಶಾಲೆಗಳನ್ನು ತೆರೆಯಿತು. ಇದರಿಂದಾಗಿ ಬಾಲ್ಯವಿವಾಹವನ್ನು ನಿಲ್ಲಿಸಲಾಯಿತು. ಯಾವುದೇ ಹುಡುಗಿ 21 ವರ್ಷಗಳಾಗದೆ ಮದುವೆ ಆಗುವಂತೆ ಇರಲಿಲ್ಲ. ಇದಕ್ಕೂ ಮೊದಲು ನಮ್ಮನ್ನೂ ಸಹ ಬುರ್ಖಾ ಒಳಗೇ ಇರಿಸಲಾಗಿತ್ತು''.

''ಹಾಗಾದರೆ ಪರಿಸ್ಥಿತಿ ಉಲ್ಟಾ ಆದದ್ದು ಹೇಗೆ?''

''ಆಗಲೂ ಅಷ್ಟೆ ಈಗಲೂ ಅಷ್ಟೆ ನಾವು ಬೇರೆ ಬೇರೆಯೇ ಇದ್ದೇವೆ. ಕೆಲವೇ ವರ್ಷಗಳಲ್ಲಿ ನಮಗಾಗಿ ಬೇರೆ ಬೇರೆ ವಿಶ್ವವಿದ್ಯಾಲಯಗಳಾದವು. ನಮ್ಮ ವಿಶ್ವವಿದ್ಯಾಲಯದೊಳಕ್ಕೆ ಯಾವ ಪುರುಷರಿಗೂ ಪ್ರವೇಶಾಧಿಕಾರವಿರಲಿಲ್ಲ.

ನಮ್ಮ ರಾಣಿ ಇರುವ ರಾಜಧಾನಿಯಲ್ಲಿ ಎರಡು ವಿಶ್ವವಿದ್ಯಾಲಯಗಳಿವೆ. ಅವುಗಳಲ್ಲಿ ಒಂದು ವಿಶ್ವವಿದ್ಯಾಲಯ ವಿಚಿತ್ರ ಬಲೂನೊಂದನ್ನು ತಯಾರಿಸಿತು. ಆ ಬಲೂನಿಗೆ ಎಷ್ಟೋ ಪೈಪುಗಳನ್ನು ಜೋಡಿಸಲಾಗಿತ್ತು. ಆ ಬಲೂನಿನ ಮೂಲಕ ಜನರು ಮೋಡದಿಂದಲೂ ಮೇಲಕ್ಕೆ ಹೋಗಿ, ಮೋಡದಿಂದ ನೀರನ್ನು ಆ ಪೈಪುಗಳ ಒಳಕ್ಕೆ ಎಳೆದುಕೊಳ್ಳುತ್ತಿದ್ದರು. ಇದರಿಂದ ಮಳೆ ಆಗುವುದು ನಿಂತಿತು.''

''ಹೌದೇನು. ಆದುದರಿಂದಲೇ ಇಲ್ಲಿನ ದಾರಿಗಳಲ್ಲಿ ಕೆಸರಿಲ್ಲ'' ಎಂದೆ. ಆದರೆ, ಪೈಪುಗಳಲ್ಲಿ ನೀರನ್ನು ಹೇಗೆ ಸಂಗ್ರಹಿಸುತ್ತಾರೆ ಎನ್ನುವುದು ನನಗೆ ಅರ್ಥವಾಗಲಿಲ್ಲ. ಆಕೆ ಅದನ್ನು ನನಗೆ ವಿವರಿಸಿ ಹೇಳಿದಳು. ಆದರೂ ಸಹ ಅದು ನನ್ನ ತಲೆಯೊಳಕ್ಕೆ ಹೋಗಲಿಲ್ಲ.

ಆಕೆ ಮುಂದುವರೆಸಿದಳು, ''ಈ ವಿಶ್ವವಿದ್ಯಾಲಯದ ಸಾಧನೆಯನ್ನು ತಿಳಿದು ಇನ್ನೊಂದು ವಿಶ್ವವಿದ್ಯಾಲಯದವರು ಹೊಟ್ಟೆಕಿಚ್ಚು ಪಟ್ಟು ಅದಕ್ಕೂ ಉತ್ತಮವಾದುದನ್ನು ಸಂಶೋಧಿಸಬಯಸಿದರು. ಇದರ ಫಲವೇ ಸೂರ್ಯನ ಕಿರಣಗಳಿಂದ ಶಾಖವನ್ನು ಹಿಡಿದಿಡುವುದು ಮತ್ತು ಬೇಕಾದಲ್ಲಿಗೆ ಅದನ್ನು ರವಾನಿಸುವ ಯಂತ್ರ.''

''ಹೆಂಗಸರು ಈ ಸಂಶೋಧನೆಯಲ್ಲಿ ತೊಡಗಿರುವಾಗ ಗಂಡಸರು ನಮ್ಮ ಸೈನ್ಯವನ್ನೂ ಬಲಪಡಿಸುವ ಕಾರ್ಯದಲ್ಲಿ ತೊಡಗಿದ್ದರು. ವಿಶ್ವವಿದ್ಯಾಲಯಗಳ ಈ ಎರಡೂ ಸಂಶೋಧನೆಗಳನ್ನು ಕೇಳಿದ ಅವರು 'ಇವೆಲ್ಲ ಬುದ್ಧಿಯ ದೊಂಬರಾಟ ಅಷ್ಟೆ' ಎಂದು ನಕ್ಕಿದ್ದರು.

ನಿಮ್ಮ ಸಂಶೋಧನೆಗಳು ಅದ್ಭುತವಾಗಿವೆ. ಅದಿರಲಿ, ನೀವು ಗಂಡಸರನ್ನು ಜನಾನಾದಲ್ಲಿ ಇರಿಸಿದ್ದೀರಿ? ಇದಕ್ಕೂ ಮೊದಲು ಅವರನ್ನು ಸೆರೆ ಹಿಡಿಯಬೇಕಾಯಿತೇನು?

''ಇಲ್ಲ''

''ಆದರೆ ತಮ್ಮ ಸ್ವಚ್ಛಂದ ಮತ್ತು ಸ್ವಾತಂತ್ರ್ಯವನ್ನೂ ಅವರು ಯಾವುದೇ ಪ್ರತಿಭಟನೆ ಇಲ್ಲದೆ ಬಿಟ್ಟುಕೊಟ್ಟು ಹಸುವಿನಂತೆ ಜನಾನಾದೊಳಕ್ಕೆ ಸೇರಿರಲಾರರು.''

''ಹೌದು ಅವರು ಪ್ರತಿಭಟಿಸಿದ್ದರು.''

''ಹಾಗಾದರೆ ಅವರ ಮೇಲೆ ಹಿಡಿತ ಸಾಧಿಸಿದುದು ಹೇಗೆ ಮಹಿಳಾ ಸೈನಿಕರೇನು?''

''ಇಲ್ಲ. ಆಯುಧಗಳಿಂದ ಅವರನ್ನು ಸೋಲಿಸಲಿಲ್ಲ. ಪುರುಷರು ಸ್ತ್ರೀಯರಿಗಿಂತಲೂ ಬಾಹುಬಲದಲ್ಲಿ ಹೆಚ್ಚು ಶಕ್ತಿಶಾಲಿಗಳು''.

''ಹಾಗಾದರೆ!?''

''ಬುದ್ಧಿಯ ಬಲದಿಂದ''

''ಇಲ್ಲೂ ಸಹ ಅವರ ಮೆದುಳು ಸ್ತ್ರೀಯರ ಮೆದುಳಿಗಿಂತಲೂ ದೊಡ್ಡದು ಹಾಗೂ ತೂಕವಾದುದು''.

''ಹೌದು ಇದು ನಿಜ''

''ಹಾಗಾದರೆ ಇದೆಲ್ಲ ಹೇಗೆ ಸಾಧ್ಯವಾಯಿತು. ದಯವಿಟ್ಟು ಹೇಳಿ. ನನಗೆ ಇದನ್ನು ತಿಳಿದುಕೊಳ್ಳಲು ತುಂಬ ಕುತೂಹಲ ಉಂಟಾಗಿದೆ''.

''ಗಂಡಸರ ಮೆದುಳಿಗಿಂತಲೂ ಹೆಂಗಸರ ಮೆದುಳು ಹೆಚ್ಚು ಚುರುಕು. ಹತ್ತು ವರ್ಷಗಳ ಹಿಂದೆ ನಮ್ಮ ಸಂಶೋಧನೆಗಳನ್ನು ದೊಂಬರಾಟ ಎಂದು ಗಂಡಸರು ಕರೆದುದರಿಂದ ಸಿಟ್ಟಾಗಿದ್ದ ಕೆಲವು ಮಹಿಳೆಯರು ಸೂಕ್ತ ಉತ್ತರ ನೀಡಬಯಸಿದ್ದರು. ಆದರೆ ಎರಡೂ ವಿಶ್ವವಿದ್ಯಾಲಯಗಳ ಪ್ರಾಚಾರ್ಯರು ಇದಕ್ಕೆ ಉತ್ತರವನ್ನೂ ಮಾತಿನಿಂದ ನೀಡದೆ ಕೃತಿಯಿಂದ ನೀಡಬೇಕು ಎಂದು ತಿಳಿಸಿದ್ದರು ಹೀಗೆ ಕೃತಿಯ ಮೂಲಕ ತೋರಿಸಲು ಅವರು ಬಹಳ ಕಾಲ ಕಾಯಬೇಕಾಗಲಿಲ್ಲ.

''ಒಳ್ಳೆಯ ಆಶ್ಚರ್ಯ!''

''ಆ ಹಮ್ಮಿನ ಪುರುಷರೆಲ್ಲರೂ ಈಗ ಕೇವಲ ಕನಸು ಕಾಣುತ್ತಿದ್ದಾರಷ್ಟೇ ಅದಿರಲಿ ಇದಾದ ಕೆಲವು ದಿನಗಳ ನಂತರ ನಮ್ಮ ಪಕ್ಕದ ರಾಜ್ಯದ ಕೆಲವರು ಬಂದು ನಮ್ಮ ರಾಜ್ಯದಲ್ಲಿ ಆಶ್ರಯ ಪಡೆದರು. ರಾಜಕೀಯ ಕಾರಣಗಳಿಂದಾಗಿ ಅವರು ತಮ್ಮ ರಾಜ್ಯದಲ್ಲಿ ತೊಂದರೆಗೆ ಸಿಕ್ಕಿಕೊಂಡಿದ್ದರು. ನೆರೆಯ ರಾಜ್ಯದ ರಾಜ ಅವರೆಲ್ಲರನ್ನೂ ತನಗೆ ಒಪ್ಪಿಸುವಂತೆ ನಮ್ಮ ರಾಣಿಯನ್ನು ಕೇಳಿಕೊಂಡ. ನಮ್ಮ ರಾಣಿ ಇದನ್ನೂ ತಿರಸ್ಕರಿಸಿದರು. ಇದರಿಂದ ಸಿಟ್ಟಿಗೆದ್ದ ರಾಜ ನಮ್ಮ ಮೇಲೆ ಯುದ್ಧ ಸಾರಿದ.''

ನಮ್ಮ ಸೈನ್ಯಾಧಿಕಾರಿಗಳು ಯುದ್ಧಕ್ಕೆ ಸಿದ್ಧರಾಗಿ ಶತ್ರುಗಳನ್ನು ಎದುರಿಸಲು ಹೊರಟರು.

ಆದರೆ ಶತ್ರು ನಮಗಿಂತಲೂ ಬಲವಾಗಿದ್ದನು. ನಮ್ಮ ಸೈನಿಕರೂ

ಸಹ ವೀರಾವೇಶದಿಂದ ಹೋರಾಡಿದರು ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ಶತೃ ಸೈನ್ಯ ನಿಧಾನವಾಗಿ ನಮ್ಮ ರಾಜ್ಯವನ್ನು ಇಂಚು ಇಂಚಾಗಿ ಕಬಳಿಸಲಾರಂಭಿಸಿತು. ದೇಶದಲ್ಲಿದ್ದ ಎಲ್ಲ ಗಂಡಸರೂ ಯುದ್ಧಕ್ಕೆ ಹೋಗಿದ್ದರು. ಹದಿನಾರು ವರ್ಷ ವಯಸ್ಸಿನ ಹುಡುಗನೂ ಸಹ ಮನೆಯಲ್ಲಿ ಇರಲಿಲ್ಲ. ಆದರೆ ಬಹಳಷ್ಟು ಜನರು ಯುದ್ಧದಲ್ಲಿ ವೀರಮರಣ ಹೊಂದಿದರು. ಶತೃಗಳು ರಾಜಧಾನಿಗೆ ಇಪ್ಪತ್ತೈದು ಮೈಲುಗಳಷ್ಟು ಹತ್ತಿರಕ್ಕೆ ಬಂದರು.

ಆಗ ಕೆಲವು ಬುದ್ಧಿವಂತ ಮಹಿಳೆಯರೊಂದಿಗೆ ರಾಣಿ ತಮ್ಮ ಅರಮನೆಯಲ್ಲಿ ಸಮಾಲೋಚನೆ ನಡೆಸಿ, ಈ ಸಮಸ್ಯೆಯಿಂದ ಹೇಗೆ ಹೊರಬರುವುದೆಂದು ಅವರೊಂದಿಗೆ ಚರ್ಚಿಸಿದರು.

ಕೆಲವರು ಯುದ್ಧಮಾಡುವಂತೆ ಸೂಚಿಸಿದಳು. ಆದರೆ ಸ್ತ್ರೀಯರಿಗೆ ಯುದ್ಧಾಭ್ಯಾಸ ಇಲ್ಲದುದರಿಂದ ಇತರರು ಅದನ್ನು ವಿರೋಧಿಸಿದರು. ಕೆಲವಂತೂ ಈ ಯುದ್ಧವನ್ನು ಗೆಲ್ಲುವ ಆಸೆಯನ್ನೇ ಬಿಟ್ಟಿದ್ದರು.

''ದೈಹಿಕ ಶಕ್ತಿಯಿಂದ ಗೆಲ್ಲಲು ಸಾಧ್ಯವಿಲ್ಲದಿದ್ದರೆ ಬುದ್ಧಿಶಕ್ತಿಯನ್ನು ಬಳಸಿ, ಈ ದೇಶವನ್ನು ರಕ್ಷಿಸಿ'' ಎಂದರು ರಾಣಿ.

ಕೆಲವು ಕ್ಷಣಗಳವರೆಗೆ ಅಲ್ಲಿ ನಿಶ್ಯಬ್ಧ ಆವರಿಸಿತು. ''ನಮ್ಮ ದೇಶ ಶತೃವಶವಾದರೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ'' ಎಂದು ರಾಣಿ.

ಸೂರ್ಯಶಕ್ತಿಯನ್ನು ಹಿಡಿದಿಡುವ ಬಗ್ಗೆ ಸಂಶೋಧನೆ ನಡೆಸಿದ್ದ ವಿಶ್ವವಿದ್ಯಾಲಯದ ಪ್ರಾಚಾರ್ಯರು ಇದುವರೆಗೆ ಏನನ್ನೋ ಗಾಢವಾಗಿ ಯೋಚಿಸುತ್ತಿದ್ದವರು ನಿಧಾನವಾಗಿ ಮಾತನಾಡಲಾರಂಭಿಸಿದರು. ''ನಾವು ಸೋಲಿಗೆ ತೀರಾ ಹತ್ತಿರದಲ್ಲಿದ್ದೇವೆ. ಇನ್ನೂ ಒಂದೇ ಒಂದು ಉಪಾಯವಿದೆ. ಇದೇ ನನ್ನ ಮೊದಲನೆಯ ಹಾಗೂ ಕೊನೆಯ ಉಪಾಯ. ಇದರಲ್ಲಿ ಯಶಸ್ಸು ಪಡೆಯದೇ ಇದ್ದಲ್ಲಿ ಆತ್ಮ ಹತ್ಯೆಯೇ ಉಳಿಯುವ ಏಕ ಮಾತ್ರ ಮಾರ್ಗ. ತಾವು ಶತೃಗಳಿಗೆ ಎಂದಿಗೂ ತಲೆಬಾಗುವುದಿಲ್ಲ ಎಂದು ಎಲ್ಲರೂ ಪ್ರತಿಜ್ಞೆ ಸ್ವೀಕರಿಸಿದರು.

ರಾಣಿ ಮಹಿಳಾ ಪ್ರಾಚಾರ್ಯರಿಗೆ ಕೃತಜ್ಞತೆ ಸಲ್ಲಿಸಿ. ಆ ಉಪಾಯವನ್ನು ಅನುಷ್ಠಾನಕ್ಕೆ ತರುವಂತೆ ಹೇಳಿದರು.

ಮಹಿಳಾ ಪ್ರಾಚಾರ್ಯರು ನಿಂತುಕೊಂಡು, ''ನಾವು ಹೊರಡುವ ಮುನ್ನ ಪುರುಷರು ಜನಾನಾದಲ್ಲಿ ಪ್ರವೇಶಿಸಬೇಕು'' ಎಂದರು. ಇದನ್ನು ರಾಣಿ ಅನುಮೋದಿಸಿದರು.

ಮಾರನೆಯ ದಿನ ರಾಣಿ ಎಲ್ಲ ಪುರುಷರೂ ಜನಾನಾದೊಳಕ್ಕೆ ಹೋಗುವಂತೆ ಆಜ್ಞೆ ಹೊರಡಿಸಿದರು.

ದಣಿದಿದ್ದ ಮತ್ತು ಗಾಯಗೊಂಡಿದ್ದ ಪುರುಷರು ಈ ಆಜ್ಞೆಯನ್ನೂ ಒಂದು ವರ ಎಂದೇ ಭಾವಿಸಿದರು. ಅವರು ತಲೆ ಬಗ್ಗಿಸಿಕೊಂಡು ಒಂದು ಮಾತನ್ನೂ ಆಡದೆ ಜನಾನಾದೊಳಕ್ಕೆ ಹೋದರು. ನಂತರ ಮಹಿಳಾ ಪ್ರಾಚಾರ್ಯರು ತಮ್ಮ ಎರಡು ಸಾವಿರ ವಿದ್ಯಾರ್ಥಿನಿಯರ ಜೊತೆ ರಣರಂಗಕ್ಕೆ ಹೋದರು ಮತ್ತು ಕೇಂದ್ರೀಕರಿಸಿದ್ದ ಸೂರ್ಯನ ಕಿರಣ ಹಾಗೂ ಶಕ್ತಿಯನ್ನು ಶತೃಗಳ ಕಡೆಗೆ ತಿರುಗಿಸಿದರು.

ಈ ಬೆಳಕು ಹಾಗೂ ಶಕ್ತಿಯನ್ನು ತಡೆದುಕೊಳ್ಳಲು ಶತೃಗಳಿಗೆ ಆಗಲಿಲ್ಲ. ಆ ಬಿಸಿಲಿಗೆ ಯಾವ ರೀತಿಯಲ್ಲಿ ಪ್ರತಿರೋಧ ಒಡ್ಡಬೇಕೆನ್ನುವುದು ತಿಳಿಯದೆ ಬೆದರಿ ಶತೃಗಳೆಲ್ಲರೂ ಪಲಾಯನ ಮಾಡಿದರು. ಅವರು ಬಿಟ್ಟು ಹೋಗಿದ್ದ ಆಯುಧಗಳೆಲ್ಲವನ್ನೂ ಇದೇ ಶಾಕದಿಂದ ಸುಡಲಾಯಿತು.

ಅಂದಿನಿಂದ ಯಾರೊಬ್ಬರೂ ನಮ್ಮ ಮೇಲೆ ಆಕ್ರಮಣ ಮಾಡುವ ಪ್ರಯತ್ನವನ್ನೂ ಸಹ ಮಾಡಿಲ್ಲ.

''ಅಂದಿನಿಂದಲೂ ನಿಮ್ಮ ದೇಶದ ಗಂಡಸರು ಹೊರಗೆ ಬರುವ ಪ್ರಯತ್ನವನ್ನೂ ಸಹ ಮಾಡಿಲ್ಲವೇನು?''

''ಹಾಗೇನೂ ಇಲ್ಲ. ಅವರು ಪ್ರಯತ್ನಿಸಿದ್ದರು. ಸೈನ್ಯಾಧಿಕಾರಿಗಳು ಪ್ರಯತ್ನದಲ್ಲಿ ಸೋಲನ್ನೂ ಅಪ್ಪಿರುವುದರಿಂದ ಶಿಕ್ಷೆಗೆ ಒಳಗಾಗಬೇಕಾಗಿರುವುದು ನಿಜ. ಆದರೆ ಅವರು ಪ್ರಾಮಾಣಿಕವಾಗಿ ಹೋರಾಟ ನಡೆಸಿದ್ದಾರೆ. ಆದುದರಿಂದ ಅವರಿಗೆ ಶಿಕ್ಷೆ ವಿಧಿಸುವುದು ಸರಿಯಲ್ಲ. ಅವರಿಗೆ ಅವರ ಮೊದಲ ಸ್ವಾತಂತ್ರ್ಯವನ್ನು ನೀಡೋಣವಾಗಲಿ ಎಂದು ಕೆಲವು ಪೋಲೀಸ್ ಕಮಿಷನ್‌ರ್‌ಗಳೂ, ನ್ಯಾಯಾಧೀಶರುಗಳೂ ರಾಣಿಗೆ ಅಪೀಲು ಕಳುಹಿಸಿದ್ದರು. ಆದರೆ ರಾಣಿಯವರು ಮುಂದೆ ಎಂದಾದರೂ ಅವರ ಸೇವೆ ಬೇಕೆನ್ನಿಸಿದರೆ ಆಗ ಅವರನ್ನು ಕರೆಸಿಕೊಳ್ಳಲಾಗುವುದು. ಅದುವರೆಗೆ ಅವರು ಈಗ ಎಲ್ಲಿದ್ದಾರೋ ಅಲ್ಲಿಯೇ ಇರಲಿ ಎನ್ನುವ ಉತ್ತರವನ್ನು ನೀಡಿದ್ದರು.

ಈಗಂತೂ ಅವರು ತಮ್ಮ ಪರ್ದಾಪದ್ಧತಿಗೆ ಒಗ್ಗಿ ಹೋಗಿದ್ದಾರೆ. ತಮ್ಮನ್ನು ಹೀಗೆ ಇರಿಸಿರುವುದಕ್ಕಾಗಿ ಅವರು ಗೊಣಗುಟ್ಟುತ್ತಲೂ ಇಲ್ಲ. ಈಗ ನಾವು 'ಜನಾನಾ' ಎಂದು ಕರೆಯದೆ, ಮರ್ದಾನಾ (ಮರ್ದ್ ಎಂದರೆ ಪುರುಷ) ಎಂದು ಕರೆಯುತ್ತೇವೆ'' ಎಂದಳು ಸಾರಾ.

''ಹಾಗಾದರೆ ಕೊಲೆ ಸುಲಿಗೆಗಳಾದಲ್ಲಿ, ಪೋಲೀಸರು, ನ್ಯಾಯಾಧೀಶರುಗಳಿಲ್ಲದೆ ನೀವು ಹೇಗೆ ನಿಭಾಯಿಸುತ್ತೀರಿ?'' ನಾನು ಕೇಳಿದೆ.

''ಮರ್ದಾನಾ ಪದ್ಧತಿ ಜಾರಿಯಲ್ಲಿ ಇರುವುದರಿಂದ ಯಾವುದೇ ಅಪರಾಧಗಳಾಗಲಿ, ಪಾಪಕಾರ್ಯಗಳಾಗಲಿ ಇಲ್ಲ. ಆದುದರಿಂದ ನಮಗೆ ಪೋಲೀಸರೇ ಬೇಕಾಗಿಲ್ಲ. ಅಪರಾಧಿಗಳೇ ಇಲ್ಲ ಎಂದ ಮೇಲೆ ನ್ಯಾಯಾಧೀಶರಾದರು ಏಕೆ ಬೇಕು''.

ಇದು ಬಹಳ ಒಳ್ಳೆಯದೇ. ರಕ್ತಪಾತವಿಲ್ಲದೆ ನೀವು ಯುದ್ಧ

ಗೆದ್ದಿದ್ದೀರಿ. ಹಾಗೆಯೇ ತಪ್ಪು ಮಾಡಿದವರನ್ನೂ ನೀವು ಶಿಕ್ಷಿಸಲೂ ಶಕ್ತರಿದ್ದೀರಿ''.

''ಸುಲ್ತಾನಾ, ಈಗ ನೀನು ನನ್ನ ಬೈಠಕ್ ಖಾನೆಗೆ ಬರುತ್ತೀಯೇನು? ಅಥವಾ ಇನ್ನೂ ಸ್ವಲ್ಪ ಹೊತ್ತು ಇಲ್ಲಿಯೇ ಕುಳಿತುಕೊಳ್ಳುತ್ತೀಯೋ?'' ಎಂದು ಸಾರಾ ಕೇಳಿದಳು.

''ನಿನ್ನ ಅಡುಗೆ ಮನೆ ರಾಣಿಯ ಬೈಠಕ್ ಖಾನೆಗಿಂತಲೂ ಕಡಿಮೆ ಏನೂ ಇಲ್ಲ. ಆದರೂ ತಮ್ಮ ಕೆಲಸ ಮಾಡಲು ನಾನು ಅಡ್ಡಿಯಾಗಿದ್ದೇನೆ ಎಂದು ಪುರುಷರು ಈಗಾಗಲೇ ನನ್ನನ್ನೂ ಬಯ್ಯುತ್ತಿರಬಹುದು'' ಎಂದೆ. ಇಬ್ಬರೂ ಮನಸಾರೆ ನಕ್ಕೆವು.

''ನಾನು ವಾಪಾಸು ಹೋಗಿ ಈ ವಿಷಯಗಳನ್ನೆಲ್ಲ ನನ್ನ ಗೆಳತಿಯರಿಗೆ ಹೇಳಿದರೆ ಅವರು ಎಷ್ಟೊಂದು ಸಂತೋಷ ಮತ್ತು ಆಶ್ಚರ್ಯ ವ್ಯಕ್ತಪಡಿಸಬಹುದು'' ಎಂದಳು ಸಾರಾ.

''ಸಾಗುವಳಿ ಕೆಲಸವನ್ನೂ ನೀವು ಹೇಗೆ ಮಾಡುತ್ತೀರಿ'' ಎಂದು ಸಾರಾಳನ್ನು ಕೇಳಿದೆ.

ವಿದ್ಯುತ್ತಿನ ಸಹಾಯದಿಂದ ನಾವು ನೆಲವನ್ನು ಉಳುತ್ತೇವೆ. ನೀರನ್ನು ಎತ್ತಲು ಮತ್ತು ಇತರ ಕಷ್ಟಕರ ಕೆಲಸಗಳಿಗೂ ಸಹ ನಾವು ಇದನ್ನೇ ಬಳಸುತ್ತೇವೆ. ನಮ್ಮಲ್ಲಿ ರಸ್ತೆ ಅಥವಾ ರೈಲುದಾರಿಗಳಿಲ್ಲ.

ಆದುದರಿಂದ ವಾಯುಮಾರ್ಗ ಪ್ರಯಾಣಕ್ಕೂ ಸಹ ನಾವು ವಿದ್ಯುತ್ತನ್ನೇ ಬಳಸುತ್ತೇವೆ.

''ಅಂದರೆ ರೈಲು ಅಥವಾ ರಸ್ತೆ ಅಫಘಾತಗಳು ನಿಮ್ಮಲ್ಲಿ ಇಲ್ಲ ಎಂದಾಯಿತು. ಅಂದಹಾಗೆ ನಿಮಗೆ ಮಳೆಬೇಕು ಅನ್ನಿಸುವುದಿಲ್ಲವೇನು?'' ಎಂದು ಕೇಳಿದೆ.

''ವಾಟರ್ ಬಲೂನನ್ನೂ ಹಾರಿಸಿದಾಗಿನಿಂದ ಮಳೆ ಬೇಕು ಅನ್ನಿಸುತ್ತಿಲ್ಲ. ಆ ಬಲೂನಿಗೆ ಹಾಕಿರುವ ಪೈಪಿನಿಂದ ನಮಗೆ ಬೇಕಾದಷ್ಟು ನೀರನ್ನು ನಾವು ತೆಗೆದುಕೊಳ್ಳುತ್ತೇವೆ. ಇದರಿಂದ ಸಿಡಿಲು ಅಥವಾ ಪ್ರವಾಹಗಳಿಂದ ನಾವು ಪೀಡಿತರಾಗುವುದಿಲ್ಲ. ಭೂಮಿಯಿಂದ ಸಾಧ್ಯವಾದಷ್ಟೂ ಹೆಚ್ಚು ಬೆಳೆ ಬೆಳೆಯಲು ನಾವು ಸದಾ ಪ್ರಯತ್ನಿಸುತ್ತಿರುತ್ತೇವೆ. ಹೀಗಾಗಿ ಇತರರೊಂದಿಗೆ ಜಗಳ ಮಾಡಲು ನಮಗೆ ಸಮಯವಿಲ್ಲ. ನಮ್ಮ ರಾಣಿಗೆ ಸಸ್ಯಶಾಸ್ತ್ರದ ಬಗ್ಗೆ ಅತಿಯಾದ ಒಲವು. ತನ್ನ ಇಡೀ ರಾಜ್ಯವನ್ನು ಸುಂದರವಾದ ಉದ್ಯಾನವನ್ನಾಗಿಸುವ ಕನಸು ಅವರಿಗಿದೆ.''

''ಒಳ್ಳೆಯ ಕನಸು. ನಿಮ್ಮ ಮುಖ್ಯ ಆಹಾರವೇನು?''

''ಹಣ್ಣುಗಳು''

''ಬೇಸಿಗೆ ಕಾಲದಲ್ಲಿ ನಿಮ್ಮ ರಾಜ್ಯವನ್ನು ಹೇಗೆ ತಂಪಾಗಿ ಇರಿಸಿಕೊಳ್ಳುತ್ತೀರಿ?'' 'ಮಳೆಗಾಲ ನಮಗೆ ದೇವರು ಕೊಟ್ಟಿರುವ ವರ' ಎಂದು ನಾವು ಅಂದುಕೊಳ್ಳುತ್ತೇವೆ.

ಆಕೆ ನನ್ನನ್ನೂ ತನ್ನ ಸ್ನಾನದ ಕೋಣೆಗೆ ಕರೆದುಕೊಂಡು ಹೋದಳು. ಅದರ ಛಾವಣಿಯನ್ನು ತೆಗೆಯಲು ಬರುವಂತೆ ಇತ್ತು. ಅದಕ್ಕೆ ಅಳವಡಿಸಿರುವ ಪೈಪ್‌ನಿಂದ ಬೇಕೆನ್ನಿಸಿದಾಗಲೆಲ್ಲ ಆಕೆ ಷವರ್‌ಬಾತ್ ಮಾಡಬಹುದಿತ್ತು.

ನೀವು ತುಂಬ ಅದೃಷ್ಟಶಾಲಿಗಳು. ಅಂದಹಾಗೆ ನಿಮ್ಮ ಧರ್ಮ ಯಾವುದು? ಎಂದು ನಾನು ಕೇಳಿದೆ.

ನಮ್ಮ ಧರ್ಮ ಪ್ರೇಮ ಮತ್ತು ಸತ್ಯದ ಮೇಲೆ ನಿಂತಿದೆ. ನಾವು ಯಾವಾಗಲೂ ಸತ್ಯ ಸಂಧರಾಗಿ ಇರಬೇಕಾದುದು ಮತ್ತು ಇತರರನ್ನು ಪ್ರೀತಿಸುವುದು ನಮ್ಮ ಧಾರ್ಮಿಕ ಕರ್ತವ್ಯವಾಗಿದೆ. ಯಾರಾದರೂ ಸುಳ್ಳು ಹೇಳುತ್ತಿರುವುದು ತಿಳಿದರೆ ಅವನಿಗೆ ಅಥವಾ ಅವಳಿಗೋ..

''ಮರಣದಂಡನೆ?''

''ಇಲ್ಲ ಮರಣದಂಡನೆಯೇನೂ ಅಲ್ಲ. ದೇವರ ಸೃಷ್ಟಿಯನ್ನು ಕೊಲ್ಲುವುದರಲ್ಲಿ ನಮಗೆ ಆನಂದ ಸಿಗದು. ಬದಲಾಗಿ ಸುಳ್ಳು ಹೇಳುವ ವ್ಯಕ್ತಿಯನ್ನು ಗಡಿಪಾರು ಮಾಡುತ್ತೇವೆ. ಮತ್ತೆ ಅವನು ಅಥವಾ ಅವಳು ಮತ್ತೆಂದೂ ನಮ್ಮ ನಾಡಿಗೆ ವಾಪಸು ಬರುವಂತಿಲ್ಲ''.

''ತಪ್ಪು ಮಾಡಿದವರಿಗೆ ಕ್ಷಮೆ ಇಲ್ಲವೇನು?''

''ಇದೆ. ಆ ವ್ಯಕ್ತಿ ಪ್ರಾಮಾಣಿಕವಾಗಿ ಪಶ್ಚಾತ್ತಾಪ ಪಟ್ಟರೆ''.

''ನಿನ್ನ ಸಂಬಂಧಿಕರನ್ನೂ ಬಿಟ್ಟು ಬೇರೆ ಪುರುಷರನ್ನು ನೋಡಲು ನಿನಗೆ ಒಪ್ಪಿಗೆ ಇದೆಯೇನು?''

''ನಾನು ನಿಮ್ಮ ರಾಣಿಯನ್ನು ಭೇಟಿಯಾಗ ಬಯಸುತ್ತೇನೆ. ಅವರು ಎಂತಹ ಒಳ್ಳೆಯ ಕಾನೂನುಗಳನ್ನು ಮಾಡಿದ್ದಾರೆ''. ಎಂದೆ.

''ಹಾಗೆಯೇ ಆಗಲಿ'' ಎಂದಳು ಸಾರಾ.

ನಂತರ ಎರಡು ಚೌಕನೆಯ ಹಲಗೆಗಳಿಗೆ ಎರಡು ಸೀಟುಗಳನ್ನು ಸೇರಿಸಿ ಸ್ಕ್ರೂನಿಂದ ಬಿಗಿ ಮಾಡಿದಳು. ಹಲಗೆಗೆ ಬಾಲ್‌ಗಳನ್ನು ಜೋಡಿಸಿದಳು. ಈ ಬಾಲ್‌ಗಳು ಹೈಡ್ರೋಜನ್ ಎಂದೂ, ಗುರುತ್ವಾಕರ್ಷಣೆಯ ವಿರುದ್ಧ ಇವು ಕೆಲಸ ಮಾಡುತ್ತವೆ ಎಂದೂ ಆಕೆ ನನಗೆ ತಿಳಿಸಿದಳು. ನಂತರ ರೆಕ್ಕೆಯಂತಹ ಎರಡು ಬ್ಲೇಡ್‌ಗಳನ್ನು ತನ್ನ ಏರ್-ಕಾರಿಗೆ ಜೋಡಿಸಿದಳು. ಈ ಕಾರು ಸೌರವಿದ್ಯುತ್ತಿನಿಂದ ಕೆಲಸ ಮಾಡುತ್ತದೆ ಎಂದು ನಂತರ ಆಕೆ ನನಗೆ ತಿಳಿಸಿದಳು. ನಾವು ಕುಳಿತುಕೊಂಡ ಮೇಲೆ ಆಕೆ ಒಂದು ಬಟನ್ ಒತ್ತಿದಳು. ರೆಕ್ಕೆಗಳು ಬೀಸಲಾರಂಭಿಸಿದವು. ಮೊದಲು ನಾವು ಮೇಲೆಕ್ಕೇರಿದೆವು. ನಂತರ ಮುಂದಕ್ಕೆ ಚಲಿಸಲಾರಂಭಿಸಿದೆವು. ಸ್ವಲ್ಪ ಹೊತ್ತಿನಲ್ಲಿಯೇ ನಾವು ರಾಣಿಯ ಉದ್ಯಾನವನ್ನೂ ತಲುಪಿದೆವು.

ಸಾರಾ ನಿಧಾನವಾಗಿ ತನ್ನ ಏರ್-ಕಾರನ್ನು ಕೆಳಗೆ ಇಳಿಸಿದಳು. ನೆಲಮುಟ್ಟಿದ ಮೇಲೆ ನಾವು ಕಾರಿನಿಂದ ಕೆಳಗೆ ಇಳಿದೆವು.

ಮೇಲೆ ನಾವು ಹಾರುತ್ತಿರುವಾಗಲೇ ಕೆಳಗೆ ರಾಣಿ ತನ್ನ ನಾಲ್ಕು

ವರ್ಷದ ಪುಟ್ಟ ಮಗಳೊಂದಿಗೆ ಉದ್ಯಾನದಲ್ಲಿ ನಡೆದಾಡುತ್ತಿದ್ದರು. ಆಕೆಯ ಜೊತೆಯಲ್ಲಿ ಅವರ ಸೇವಕಿಯರೂ ಇದ್ದರು.

ಸಾರಾಳನ್ನು ಕಂಡು, "ಅರೆ, ಏನಿಲ್ಲಿ?" ಎಂದು ಪ್ರಶ್ನಿಸಿದರು. ಸಾರಾ ರಾಣಿಗೆ ನನ್ನ ಪರಿಚಯ ಮಾಡಿಕೊಟ್ಟಳು. ರಾಣಿಯು ಮಂದಸ್ಮಿತಳಾಗಿ ನನ್ನನ್ನೂ ಸ್ವಾಗತಿಸಿದರು.

ರಾಣಿಯೊಂದಿಗೆ ಮಾತನಾಡಲು ಬಹಳ ಸಂತೋಷವೆನ್ನಿಸುತ್ತಿತ್ತು. ತನ್ನ ದೇಶದ ಜನರು ಇತರ ದೇಶದೊಂದಿಗೆ ವ್ಯಾಪಾರ ಸಂಪರ್ಕ ಇರಿಸಿಕೊಳ್ಳಲು ಯಾವುದೇ ಅಡ್ಡಿ ಇಲ್ಲ ಎಂದರು ರಾಣಿ. ಆದರೆ ಯಾವ ದೇಶದಲ್ಲಿ ನಾರಿಯರನ್ನು ಜನಾನಾದಲ್ಲಿ ಇರಿಸಿಲಾಗಿದೆಯೋ ಆ ದೇಶದೊಂದಿಗೆ ವಾಣಿಜ್ಯ ಸಂಪರ್ಕ ಸಾಧ್ಯವಿಲ್ಲ ಎಂದೂ ಹೇಳಿದರು. ಅಂದರೆ ನಮ್ಮ ದೇಶದೊಂದಿಗೆ ಅವರು ವಾಣಿಜ್ಯ ಸಂಬಂಧ ಇರಿಸಿಕೊಳ್ಳಲು ಇಷ್ಟಪಡಲಿಲ್ಲ. ಸಾಮಾನ್ಯವಾಗಿ ಪುರುಷರು ನೈತಿಕವಾಗಿ ಉತ್ತಮರೇನೂ ಅಲ್ಲ ಆದುದರಿಂದ ಅವರೊಂದಿಗೆ ನಾವು ಸಂಪರ್ಕ ಇರಿಸಿಕೊಳ್ಳುವುದಿಲ್ಲ. ನಾವು ಇತರರ ಆಸ್ತಿಗೆ ಕಣ್ಣು ಹಾಕುವುದಿಲ್ಲ. ಕೊಹಿನೂರ್‌ಗಿಂತಲೂ ಉತ್ತಮವಾದ ವಜ್ರ ಬೇರೆಯವರ ಬಳಿ ಇದ್ದರೂ ಸಹ ಅದನ್ನು ಕಿತ್ತುಕೊಳ್ಳಲು ನಾವು ಆಶಿಸುವುದಿಲ್ಲ. ಜ್ಞಾನವೆನ್ನುವ ಸಮುದ್ರದ ಆಳಕ್ಕೆ ಮುಳುಗಿ ಅಲ್ಲಿನ ಮುತ್ತುಗಳನ್ನು ಆಯ್ದುಕೊಳ್ಳುತ್ತೇವೆ. ಪ್ರಕೃತಿ ನಮಗೆ ನೀಡಿರುವ ಕೊಡುಗೆಯನ್ನು ನಾವು ತೃಪ್ತಿಯಿಂದ ಅನುಭವಿಸುತ್ತೇವೆ. ಅವರ ಬಗ್ಗೆ ಇದ್ದಿಷ್ಟನ್ನೂ ರಾಣಿಯಿಂದ ನಾನು ತಿಳಿದುಕೊಂಡೆ.

ರಾಣಿಯಿಂದ ಬೀಳ್ಕೊಂಡು ಪ್ರಸಿದ್ಧ ವಿಶ್ವವಿದ್ಯಾಲಯಗಳಿಗೆ ನಾವು ಭೇಟಿಕೊಟ್ಟೆವು. ಅಲ್ಲಿ ಲ್ಯಾಬೋರೇಟರಿ, ಕಾರ್ಯಶಾಲೆಗಳನ್ನೂ ಅವರು ನಮಗೆ ತೋರಿಸಿದರು.

ನಂತರ ಮತ್ತೆ ನಾವು ಏರ್-ಕಾರಿನಲ್ಲಿ ಕುಳಿತುಕೊಂಡೆವು. ಅದು ಮೇಲಕ್ಕೆ ಏರುತ್ತಿದ್ದಂತೆಯೇ ಅದೇಕೋ ತಿಳಿಯದು, ನಾನು ಕಾರಿನಿಂದ ಜಾರಿ ಕೆಳಗೆ ಬಿದ್ದೆ. ಆ ಬೀಳುವಿಕೆಗೆ ಹೆದರಿ ಕಣ್ತೆರೆದೆ. ನನ್ನ ಕನಸು ಭಂಗವಾಯಿತು.

ನನ್ನ ಬೆಡ್‌ರೂಮಿನ ಆರಾಮಕುರ್ಚಿಯಲ್ಲಿ ನಾನು ಆರಾಮವಾಗಿ ಕುಳಿತುಕೊಂಡಿದ್ದೆನು.

ಸಂವಾದ

ಮಹಿಳಾ ವಾದ ಮತ್ತು ಮಹಿಳಾ ಸಂವೇದನೆ

- ಅರವಿಂದ ಚೊಕ್ಕಾಡಿ

ಮಹಿಳಾವಾದ ಮತ್ತು ಮಹಿಳಾ ಸಂವೇದನೆ ಇವೆರಡರಲ್ಲಿ ಮೊದಲನೆಯದು ಬಹುರ್ಮುಖವಾದುದು. ಎರಡನೆಯದು ಅಂತರ್ಮುಖಿಯಾದುದು. ಮಹಿಳಾವಾದ ಗಮನಿಸುವಂಥದ್ದು ಒಟ್ಟು ಸಮಾಜದಲ್ಲಿ ನಡೆಯುವ ಸ್ತ್ರೀ ಶೋಷಣೆಯ ನಾನಾ ಪರಿಗಳನ್ನು, ಅವುಗಳಿಂದ ಸಮಾಜದ ವ್ಯವಸ್ಥಿತ ಕಾರ್ಯ ನಿರ್ವಹಣೆಗುಂಟಾಗುವ ತೊಂದರೆಗಳನ್ನು ; ಸಹಜವಾಗಿ ಸಲ್ಲಬೇಕಾದ ಸಾಮಾಜಿಕ ನ್ಯಾಯ ಮಹಿಳೆಯರಿಗೆ ಸಲ್ಲದೆ ಇರುವುದನ್ನು. ಹೀಗಾಗಿ ಮಹಿಳಾ ವಾದ, ಪುರುಷ ಪ್ರಧಾನ ವ್ಯವಸ್ಥೆಯನ್ನು ಸ್ತ್ರೀ-ಪುರುಷರಿಬ್ಬರ ಸಮಾನ ಪ್ರಾಧಾನ್ಯತೆ ಉಳ್ಳ ವ್ಯವಸ್ಥೆಯಾಗಿ ರೂಪಿಸಲು ಶ್ರಮಿಸುತ್ತದೆ ಎನ್ನಲು ಅಡ್ಡಿಯಿಲ್ಲ. ಆದ್ದರಿಂದಲೇ ಮಾನವೀಯ ಸ್ಪಂದನೆ ಉಳ್ಳ ಯಾವ ಪುರುಷನೂ ಮಹಿಳಾವಾದಿಯಾಗಬಹುದು.

ಮಹಿಳಾ ಸಂವೇದನೆ ಇದಕ್ಕಿಂತ ಭಿನ್ನವಾದದ್ದು. ಅದು ಮಹಿಳೆಯೊಬ್ಬಳ ಮನಸ್ಸಿನಿಂದ ಬರಬೇಕಾದ್ದು. ಅಂಥದಲ್ಲಿ ಯಾವ ಪುರುಷ ಎಷ್ಟೇ ಮಹಿಳಾವಾದಿಯಾಗಿದ್ದರೂ ಮಹಿಳಾ ಸಂವೇದನೆಯನ್ನು ಹೇಳಲಾರ. ಅದು ಪ್ರಕೃತಿ ಸಹಜ ಲೈಂಗಿಕ ಭಿನ್ನತೆಗಳಿಗನುಗುಣವಾಗಿ ಬದುಕನ್ನು ಗ್ರಹಿಸುವ, ಅನುಭವಿಸುವ, ಆಲೋಚಿಸುವ ಕ್ರಿಯೆಗಳಿಂದ ಮೂಡಿ ಬರುವಂಥದ್ದು.

ನಿಜವಾಗಿ ಇಲ್ಲಿ ಮುಖ್ಯವಾಗಬೇಕಾದ್ದು ಮಹಿಳಾ ಸಂವೇದನೆಯೇ. ತನ್ನ ಬೇಕು, ಬೇಡಗಳನ್ನು, ಜೀವನ ವಿಧಾನವನ್ನು ನಿರ್ಧರಿಸ ಬೇಕಾದವಳು ಅವಳೇ. ಆದರೆ ಇಲ್ಲೇ ಇರುವ ದುರದೃಷ್ಟವೆಂದರೆ ಪಾರಂಪರಿಕವಾಗಿ ಹೇಗೂ ಮಹಿಳೆಯರ ಬೇಕು ಬೇಡಗಳನ್ನು ನಿರ್ಧರಿಸಿದ್ದು ಪುರುಷರೇ, ಅಲ್ಲದೆ ಮಹಿಳಾವಾದ ಬಹುವಾಗಿ ಗುರುತಿಸುವಂಥ ಸ್ತ್ರೀ ಶೋಷಣೆಯ ನಾನಾ ಮೂಲಗಳ ಬಗ್ಗೆ ವ್ಯಾಖ್ಯಾನಿಸುವವರೂ ಹೆಚ್ಚಿನ ಮಟ್ಟಿಗೆ ಪುರುಷರೇ. ಸ್ವತಃ ಮಹಿಳೆಯರೇ ವ್ಯಾಖ್ಯಾನಿಸತೊಡಗಿದಾಗಲೂ ಅದು ಶೋಷಣೆಯ ಸಾಮಾಜಿಕ ವ್ಯಾಪ್ತಿಯಲ್ಲಿಯೇ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಬಹುದು. ಅದಕ್ಕುದಾಹರಣೆ ಹೇಳಬೇಕೆಂದರೆ, ಒಬ್ಬ ವಿವಾಹಿತ ಅಥವಾ

ಅವಿವಾಹಿತ, ಪುರುಷನೊಬ್ಬ ತನಗೆ ಪ್ರಿಯಳಾಗುವ ಇನ್ನೊಬ್ಬಾಕೆ ಹೆಣ್ಣಿನ ಬಗ್ಗೆ ಹೇಳಬಲ್ಲ, ಕವಿಗಳು ಹೆಣ್ಣಿನ ಬಗ್ಗೆ ಅಸಹ್ಯಕರ ರೀತಿಯಲ್ಲೂ ಕವನ ಬರೆಯಬಲ್ಲರು. ಆದರೆ ಮಹಿಳಾ ಪರಚಿಂತನೆಯುಳ್ಳ ಒಬ್ಬ ಮಹಿಳೆಗೆ ಈ ತೆರನ ತನ್ನ ವೈಯಕ್ತಿಕ ಬಯಕೆಗಳನ್ನು ಹೇಳಿಕೊಳ್ಳಲು ಸಾಧ್ಯವಾಗಿಲ್ಲವೆಂದರೆ ತಪ್ಪಾಗಲಾರದು.

ಇಂಥಲ್ಲಿ ಎರಡು ಕಾರಣಗಳಿಗಾಗಿ ಮಹಿಳಾ ಸಂವೇದನೆ ಮುಖ್ಯವಾಗುತ್ತದೆ. ಮೊದಲನೆಯದಾಗಿ ಈಗಾಗಲೇ ಗುರುತಿಸಲಾಗಿರುವ ಮಹಿಳಾ ಶೋಷಣೆಯನ್ನು ವ್ಯಾಖ್ಯಾನಿಸುವ ಪುರುಷರು ಮಾನವೀಯ ಕಳಕಳಿಯಿಂದ ಮಹಿಳೆಯ ಮೇಲೆ ನಡೆಯುವ ದೌರ್ಜನ್ಯವನ್ನು ಗ್ರಹಿಸಿ ವ್ಯಾಖ್ಯಾನಿಸಬಲ್ಲರೇ ಹೊರತು ಅನುಭವಿಸಿ ಅಲ್ಲ. ಅಂಥಲ್ಲಿ ಮಹಿಳಾ ಶೋಷಣೆಯಲ್ಲಿರುವ ಹಲವಾರು ಒಳಹರಿವುಗಳು ಪುರುಷರಿಗೆ ದಕ್ಕದಿರುವ ಸಾಧ್ಯವಿದೆ. ಇದರ ಎರಡನೆಯ ಹಂತ ಮಹಿಳಾ ಶೋಷಣೆಗೆ ಧ್ವನಿಕೊಡುವ ಮಹಿಳೆಯರು. ಈ ವ್ಯಾಖ್ಯಾನ ಪುರುಷರು ಕೊಡುವ ವ್ಯಾಖ್ಯಾನಕ್ಕಿಂತ ಹೆಚ್ಚು ಸಮರ್ಪಕವಾಗಿರಬಲ್ಲುದು. ಆದರೆ ಮಹಿಳೆಯರ ವೈಯಕ್ತಿಕ ಸಂವೇದನೆಗಳನ್ನು ಹೇಳಲಾಗದ ಒಂದು ವಾತಾವರಣದಲ್ಲಿ ಮಹಿಳಾವಾದಿಗಳಾಗಿರುವ ಮಹಿಳೆಯರಿಗೂ ಕೂಡ ಸ್ತ್ರೀ ಶೋಷಣೆಯ ಇನ್ನೆಷ್ಟು ಒಳನೋಟಗಳು ಪ್ರಾಪ್ತವಾಗದಿರಲು ಸಾಧ್ಯವಿದೆ. ಏಕೆಂದರೆ ಸಮಗ್ರ ಸಮಾಜದಲ್ಲಿ ಮಹಿಳಾಪರ ನಿಲುಮೆಗಳ ಕೊರತೆ ಇರುವ ಸ್ಥಿತಿಯಲ್ಲಿ ಸ್ವಯಂ ಸಂವೇದನೆಗಳನ್ನು ಹೇಳಿಕೊಳ್ಳಲಾಗದ ಪರಿಸರದಲ್ಲಿ ಕಾಣಿಸಿಕೊಳ್ಳುವ ಅಸ್ಥಿರತೆ ಆಕ್ರೋಶದ ಧ್ವನಿಯಾಗಿ ಹೊರಹೊಮ್ಮಬಲ್ಲುದು. ಅದು ಒಂದು ಪ್ರತಿಭಟನೆ ಒಡ್ಡಬಹುದೇ ಹೊರತು ಶೋಷಣೆಯನ್ನು ಆಮೂಲಾಗ್ರವಾಗಿ ನಿವಾರಿಸುತ್ತದೆಯೆಂದು ಹೇಳಲಾಗದು. ಏಕೆಂದರೆ ಸ್ತ್ರೀ-ಪುರುಷರ ಅನಿವಾರ್ಯ ಬೆಸುಗೆ ಮತ್ತೆ ಮತ್ತೆ ಸ್ತ್ರೀಶೋಷಣೆಯತ್ತ ಮಹಿಳೆಯರನ್ನ ತಳ್ಳುತ್ತಲೇ ಇರುತ್ತದೆ.

ಎರಡನೆಯದಾಗಿ ಕುಟುಂಬದ ಒಳಿತಿಗಾಗಿಯೂ ಮಹಿಳಾ ಸಂವೇದನೆ ಹೊರಬರಬೇಕು. ಮಹಿಳೆಯನ್ನು ಶೋಷಿಸುವ ಪುರುಷನದೂ ಇಲ್ಲೊಂದು ದುರಂತವಿದೆ. ಆತ ತನ್ನ ವೈಯಕ್ತಿಕ ದೌರ್ಬಲ್ಯವನ್ನು ಕುಟುಂಬದೊಂದಿಗಲ್ಲ; ತನ್ನ ಪತ್ನಿಯೊಂದಿಗೂ ಹೇಳಿಕೊಳ್ಳಲಾರದಂಥ ಸ್ಥಿತಿ ಇದೆ. ಹೇಳಿದರೆ ಎಲ್ಲಿ ತನ್ನ ಘನತೆಗೆ ಕುಂದು ಬರುತ್ತದೋ ಎಂಬ ಭೀತಿ ಅವನನ್ನು ಕಾಡುತ್ತಲೇ ಇರುತ್ತದೆ. ಇಂಥಲ್ಲಿ ಪಾರಂಪರಿಕ ಒತ್ತಡದಿಂದಲ್ಲೋ ಇಲ್ಲ ತನ್ನ ಸಹಜ ಸಹನಶೀಲತೆಯಿಂದಲೋ ಹೆಣ್ಣು ತನ್ನ ಒಳಗುದಿಯೊಂದಿಗೇ ಬದುಕು ನಡೆಸಬಲ್ಲಳು. ಆದರೆ ಪುರುಷನಿಂದ ಅದು ಸಾಧ್ಯವಾಗದು. ಆತನ ಹೇಳಿಕೊಳ್ಳಲಾಗದ ಒಳಗುದಿ ಏನೇನೋ ವಿಕೃತಿಗಳಾಗಿ ಕುಟುಂಬಕ್ಕೆ ಹಾನಿಯುಂಟುಮಾಡಬಲ್ಲುದು ಆದಕಾರಣ ಗಂಡು-ಹೆಣ್ಣು ತಮ್ಮ ಒಳಗುದಿಗಳನ್ನು ಪರಸ್ಪರ ಹೇಳಿಕೊಳ್ಳುವಂಥ ವಾತಾವರಣ ನಿರ್ಮಾಣವಾದಾಗ ಕುಟುಂಬದಲ್ಲಿ ಆತ್ಮೀಯ ಸನ್ನಿವೇಶ ಕಂಡು ಬರಬಲ್ಲುದು. ಅಲ್ಲಿಯ ತನಕ ಹೆಣ್ಣು ಶೋಷಿತಳಾಗಿರುತ್ತಾಳೆ: ಗಂಡಿನಿಂದ; ಗಂಡೂ ಮಾನಸಿಕವಾಗಿ ಶೋಷಿತನಾಗಿರುತ್ತಾನೆ : ತನ್ನ ಸ್ವಯಂಕೃತ ಪ್ರಾರಾಬ್ಧದಿಂದ.

ಇಂಥ ಒಂದು ಮುಕ್ತ ಬದುಕು ಈ ಸಮಾಜದಲ್ಲಿ ಸಾಧ್ಯವಾಗಬೇಕಾದರೆ, ಮತ್ತೆ ಮಹಿಳಾವಾದವೇ ಬಹುಮುಖ್ಯವಾಗುತ್ತದೆ. ಏಕೆಂದರೆ ಮಹಿಳೆ ತನ್ನ ಸಹಜ ಸಂವೇದನೆಗಳನ್ನು ಹೇಳಿಕೊಳ್ಳಲಾರದಂಥ ಸ್ಥಿತಿಯೊಂದನ್ನು ನಿರ್ಮಿಸಿದ್ದು ಈ ಸಮಾಜ. ಆದ ಕಾರಣವೇ ಪುರುಷನೂ ಸೇರಿದಂತೆ ಪ್ರತಿಯೊಬ್ಬ ಮಹಿಳಾವಾದಿಯ ಆಕ್ರೋಶವೂ ಕೂಡ ಅರ್ಥ ಪಡೆದುಕೊಳ್ಳುತ್ತದೆ. ಜಾಣ ಕಿವುಡರನ್ನು ತಲುಪಬಲ್ಲ ಧ್ವನಿ ತರಂಗಗಳಾಗುತ್ತವೆ.

ಅಂಥ ಧ್ವನಿ ಗಟ್ಟಿಯಾಗಿ ಕೇಳಿ ಬರಬೇಕಾದರೆ ಮಹಿಳೆ ಆರ್ಥಿಕವಾಗಿ ಸಶಕ್ತಳಾಗಬೇಕು. ಸಾಂಸ್ಕೃತಿಕ ಶಕ್ತಿಯ ಬಗ್ಗೆ ಏನೇನೆಲ್ಲ ಹೇಳಿಕೊಂಡರೂ ಕೂಡ ಬದುಕನ್ನು ನಿಯಂತ್ರಿಸುತ್ತಿರುವುದು ಆರ್ಥಿಕ ಶಕ್ತಿಯೇ. ನಿಜವಾಗಿಯೂ ಸಾಂಸ್ಕೃತಿಕ ಶಕ್ತಿಗೆ ಬೆಲೆ ಇರುತ್ತಿದ್ದಲ್ಲಿ ಮಹಿಳೆ ಗೌರವಾರ್ಹಳಾಗಬೇಕಿತ್ತು. ಏಕೆಂದರೆ ತಾಯ್ನಾಡು, ತಾಯ್ನುಡಿ, ತಾಯ್ತನ, ತಾಯಿ ಕಲಿಸಿದ ಬುದ್ಧಿ ಎಂದು ಶೋಷಿತಳಾಗಿರಬೇಕಾದರೆ, ಕನಿಷ್ಠ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಕಳೆದುಕೊಂಡಿರುವ ಪರಿಸ್ಥಿತಿ ಇದ್ದರೆ ಅದಕ್ಕೆ ಕಾರಣ ಆಕೆಯ ಆರ್ಥಿಕ ಪರಾವಲಂಬನೆ. ಇದನ್ನು ತೊಡೆದು ಹಾಕುವತ್ತ ಮಹಿಳೆಯರು, ಮಹಿಳಾ ವಾದಿಗಳು ಗಂಭೀರ ಪ್ರಯತ್ನ ಮಾಡಬೇಕಾಗಿದೆ. ಅದು ಸಾಧ್ಯವಾದಾಗ ಸ್ತ್ರೀ-ಪುರುಷ ಸಹಭಾಗಿತ್ವದ ಸಮಾನತೆಯ ಸಮಾಜ ರೂಪುಗೊಂಡೀತು. ಅಲ್ಲಿ ಮಹಿಳಾ ಸಂವೇದನೆಗಳು ಹೊರಬಂದೀತು.

ಆದರೆ ಶತಮಾನಗಳು ಉರುಳಿದರೂ ಈ ದೇಶದಲ್ಲಿ ಇದೆಲ್ಲ ಸಾಧ್ಯವಾದೀತೇ ಎಂಬುದು ಸಂಶಯಾಸ್ಪದ. ಏಕೆಂದರೆ ಹಿಂದೂ ಧರ್ಮದ ಮೂವತ್ತು ಮೂರು ಕೋಟಿ ದೇವತೆಗಳು + ಅವರ ಸಂತಾನ + ಆಧುನಿಕ ದೇವಮಾನವರು ಹಾಗೂ ಇತರೆಲ್ಲ ಧರ್ಮಗಳ ದೇವರುಗಳು + ದೇವ ಮಾನವರು ಇರುವ ಈ ದೇಶದಲ್ಲಿ 'ಬುದ್ಧಿ' ಎಂಬ ದೇವತೆ ಇಲ್ಲವಲ್ಲ?

ಈ ಲೇಖನದ ವಿಚಾರಗಳನ್ನು ಕುರಿತಂತೆ ಚರ್ಚೆಗೆ ಆಹ್ವಾನಿಸಿದೆ. ದಯವಿಟ್ಟು ಈ ಸಂವಾದದಲ್ಲಿ ಭಾಗವಹಿಸಿ - ಸಂ.

ನಿಮಗಿದು ತಿಳಿದಿರಲಿ

"ಸುರಕ್ಷ ಹೆರಿಗೆ ಯೋಜನೆ"

ಗ್ರಾಮೀಣ ಪ್ರದೇಶಗಳ ಗರ್ಭಿಣಿ ಮಹಿಳೆಯರಿಗೆ ರಕ್ಷಾ ಕವಚ

ಗ್ರಾಮೀಣ ಪ್ರದೇಶದ ಮಹಿಳೆಯರ ಸುರಕ್ಷಿತ ತಾಯ್ತನ ಮತ್ತು ಶಿಶು ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರ ರೂಪಿಸಿದ ಉದಾತ್ತ ಯೋಜನೆಯಿದು.

ಹೆರಿಗೆಯ ಪೂರ್ವದಲ್ಲಿ ಮತ್ತು ಹೆರಿಗೆ ನಂತರವೂ ಈ ಯೋಜನೆಯ ಸೌಲಭ್ಯ ಒದಗಿರುವ ಮೂಲಕ ತಾಯಿಯ ಆರೋಗ್ಯ ಕಾಪಾಡಿ ಮರಣವನ್ನು ಮತ್ತು ಶಿಶು ಮರಣವನ್ನು ತಪ್ಪಿಸುವುದು ಯೋಜನೆಯ ಮುಖ್ಯ ಗುರಿ.

<u>ನೆನಪಿಡಿ:</u>

☞ ಹೆರಿಗೆಯನ್ನು ತರಬೇತಿ ಪಡೆದವರಿಂದ ಶುಚಿಯಾದ ಸ್ಥಳದಲ್ಲಿಯೇ ಮಾಡಿಸಬೇಕು. ಇದು ತಾಯಿಯ ಹಾಗೂ ಮಗುವಿನ ಆರೊಗ್ಯಕ್ಕೆ ಅತ್ಯಂತ ಮುಖ್ಯವಾದುದು.

☞ ಹೆರಿಗೆ ನಂತರ ತಾಯಿ ಮತ್ತು ಮಗುವಿನ ಆರೋಗ್ಯದ ಕಡೆ ಸಾಕಷ್ಟು ಗಮನ ನೀಡಬೇಕು.

☞ ಬಾಣಂತಿಯರಿಗೆ ಸಾಕಷ್ಟು ಪೌಷ್ಟಿಕ ಆಹಾರ ನೀಡಬೇಕು.

☞ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ನಿಮ್ಮ ಮನೆಗಳಿಗೆ ಕಾಲ ಕಾಲಕ್ಕೆ ಭೇಟಿ ನೀಡಿ ನಿಮ್ಮ ಆರೋಗ್ಯ ವಿಚಾರಿಸಿ ಅಗತ್ಯ ಸಲಹೆ ನೀಡುವರು.

☞ ಪ್ರಾಥಮಿಕ ಆರೋಗ್ಯ ಕೇಂದ್ರ: ಉಪ ಕೇಂದ್ರಗಳಲ್ಲಿ ವೈದ್ಯರು,ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ನಿಮಗೆ ನಿಗದಿತವಾಗಿ ಅಗತ್ಯವಾದ ಸಲಹೆ, ಸೂಚನೆ ಮತ್ತು ಸಹಕಾರವನ್ನು ನೀಡುವರು.

ಮನೆಯಲ್ಲಿ ಹೆರಿಗೆ ಮಾಡಿಸಿಕೊಳ್ಳುವವರಿಗೆ ಸುರಕ್ಷ ಪೊಟ್ಟಣದ ಸೌಲಭ್ಯ ಪೊಟ್ಟಣದಲ್ಲಿರುವ ಸಾಮಗ್ರಿಗಳು

ಸಂಸ್ಕರಿಸಿದ ಹೊಸ ಬ್ಲೇಡ್, ಸಂಸ್ಕರಿಸಿದ ತೆಳುವಾದ ಜಾಲರಿ ಬಟ್ಟೆ, ಸಂಸ್ಕರಿಸಿದ ಹೊಕ್ಕಳ ಬಳ್ಳಿ ಕಟ್ಟುವ ದಾರ, ಸಂಸ್ಕರಿಸಿದ ಗ್ಲೌಸ್ ಒಂದು ಜೊತೆ, ಸಂಸ್ಕರಿಸಿದ ಪ್ಯಾಡ್, ಸಂಸ್ಕರಿಸಿದ ಹೊಕ್ಕಳ ಬಳ್ಳಿ ಕ್ಲಾಂಪ್, ಸೋಪು, ಪ್ಲಾಸ್ಟರ್, ಆಂಟಿ ಸೆಪ್ಟಿಕ್ ಲೋಶನ್ ಮತ್ತು ಟವಲ್.

ಈ ಬಗ್ಗೆ ಅಗತ್ಯ ಮಾಹಿತಿ ಮತ್ತು ಸೌಲಭ್ಯಗಳಿಗೆ: ನಿಮ್ಮ ಹತ್ತಿರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ: ಉಪಕೇಂದ್ರದಲ್ಲಿರುವ ಮಹಿಳಾ ಆರೋಗ್ಯ ಸಹಾಯಕರನ್ನು ಸಂಪರ್ಕಿಸಿರಿ.

ತಾಯಿಯ ಎದೆಯ ಹಾಲು ಮಗುವಿಗೆ ಸರ್ವೋತ್ತಮ ಆಹಾರ

ಕರ್ನಾಟಕ ವಾರ್ತೆ

ಮಹಿಳಾ ಜಾಗೃತಿಯ ಆದರ್ಶಮಾದರಿ



ಮಹಾರಾಷ್ಟ್ರದ ಪುಣೆ ಚಾರಿತ್ರಿಕವಾಗಿ ಅತ್ಯಂತ ಮಹತ್ವದ ಪಟ್ಟಣ. ಆಧುನಿಕ ಭಾರತದ ವಿಕಾಸದಲ್ಲಿ ಬಹುಮುಖ ರೀತಿಯಲ್ಲಿ ಪಾಲ್ಗೊಂಡ ವೀರರತ್ನಗಳು ಜನಿಸಿದ ನೆಲವಿದು. 'ಮಹಿಳಾ ಶಿಕ್ಷಣ' ಮತ್ತು 'ಮಹಿಳಾ ಸುಧಾರಣೆ'ಗಾಗಿ ಅರ್ಥಪೂರ್ಣ ಮತ್ತು ಕ್ರಾಂತಿಕಾರಿ ಪ್ರಯೋಗಗಳು ನಡೆದ ಸ್ಥಳವಿದು. 1884ರಲ್ಲಿ ಪುಣೆಯಲ್ಲಿ ಆರಂಭವಾದ 'ಕನ್ಯಾಶಾಲೆ' ಮಹಿಳಾ ಜಾಗೃತಿಯಲ್ಲಿ ಹೊಸದೊಂದು ದಿಶೆಯನ್ನು ತೆರೆಯಿತು. ಅದರ ರೂವಾರಿ ಶ್ರೀಮತಿ ಸಾವಿತ್ರಿಬಾಯಿ ಫುಲೆ.

ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಶ್ರೀಮಂತ ಕುಟುಂಬವೊಂದರಲ್ಲಿ 1831ರ ಜನವರಿ 3ರಂದು ಜನಿಸಿದ ಸಾವಿತ್ರಿಗೆ 9ನೇ ವಯಸ್ಸಿಗೆ ಮದುವೆ. ಮಹಾರಾಷ್ಟ್ರದ ಸಾಮಾಜಿಕ ಕ್ರಾಂತಿಕಾರಿ ಜ್ಯೋತಿಬಾ ಫುಲೆಯನ್ನು ವಿವಾಹವಾದ ಸಾವಿತ್ರಿಗೆ ಬೆಳಕಿನ ಅರಮನೆಯೇ ತೆರೆದಂತಾಯಿತು. ಹೊಲದಲ್ಲಿ ದುಡಿಯುವ ಗಂಡನಿಗೆ ಬುತ್ತಿ ಹೊತ್ತು ಹೊರಟ ಸಾವಿತ್ರಿಗೆ ಅಲ್ಲಿ ಗಂಡ ಕೆಲಸದ ನಡುವೆ ಅಕ್ಷರಾಭ್ಯಾಸ ಮಾಡಿಸಿದರು. ಹೆಣ್ಣು ಮಗಳೊಬ್ಬಳು, ಅದರಲ್ಲೂ ಕೆಳಜಾತಿಯವಳು ಅಕ್ಷರಜ್ಞಾನ ಪಡೆಯುವುದು ಶಾಸ್ತ್ರವಂತರಿಗೆ ಸಹಿಸಲಾಗಲಿಲ್ಲ. ಸಾವಿತ್ರಿ ಹೊಲದಲ್ಲಿ ಶಿಕ್ಷಣ ಕಲಿಯುವುದು ಇಡೀ ಹಳ್ಳಿಗೆ ತಿಳಿಯಿತು. ಇಡೀ ಹಳ್ಳಿಯ ಜನ ಅವರ ತಂದೆತಾಯಿಗಳ ಮೇಲೆ ಒತ್ತಡ ಹೇರಿದರು. ಊರ ಜನರ ವೈರ ಕಟ್ಟಿಕೊಳ್ಳಲಾರದ ಜ್ಯೋತಿಬಾನ ತಂದೆ ತಾಯಿಗಳು ಮಗನನ್ನು ಮನೆಯಿಂದ ಹೊರಗಟ್ಟುವ ನಿರ್ಧಾರ ಕೈಗೊಂಡರು. ಮನೆಯಿಂದ ಹೊರಗೆ ತಳ್ಳಿಸಿಕೊಂಡ ಗಂಡನನ್ನು ಸಾವಿತ್ರಿಯೂ ಹಿಂಬಾಲಿಸಿದಳು.

ಅತ್ತೆ ಮಾವನ ಮನೆ ಬಿಟ್ಟು ಹೊರಗೆ ಬಂದ ಸಾವಿತ್ರಿಗೆ ಗಂಡನಿಂದ ಪೂರ್ಣಾವಧಿ ಶಿಕ್ಷಣ ದೊರೆಯಿತು. ನಂತರ ಶಿಕ್ಷಕ ತರಬೇತಿ ಶಾಲೆಗೂ ಸೇರಿಕೊಂಡು ಶಿಕ್ಷಣ ತರಬೇತಿಯಲ್ಲಿ ಯಶಸ್ವಿಯಾಗಿ ತೇರ್ಗಡೆಯಾದಳು. ಆಗ ಅವಳ ಜೊತೆ ತರಬೇತಿ ಪಡೆದ ಮತ್ತೊಬ್ಬ ಮಹಿಳೆಯೆಂದರೆ ಫಾತಿಮಾ ಶೇಕ್. ಶಿಕ್ಷಣ ತರಬೇತಿ ಪಡೆದ ಮೇಲೆ ಗಂಡನೊಂದಿಗೆ ಸೇರಿ ಹೆಣ್ಣು ಮಕ್ಕಳ ಶಾಲೆಯೊಂದನ್ನು ಪುಣೆಯಲ್ಲಿ 1948ರಲ್ಲಿ ಸಾವಿತ್ರಿ ಆರಂಭಿಸಿಯೇ ಬಿಟ್ಟಳು. ಇಂತಹ ದುಸ್ಸಾಹಸವನ್ನು ಒಪ್ಪಿಕೊಳ್ಳಲು ಸಾಂಪ್ರದಾಯಿಕ ಸಮಾಜ ಸಿದ್ಧವಿರಲಿಲ್ಲ. ಆರಂಭದಲ್ಲಿ ಈ ಶಾಲೆಗೆ ಸೇರಿದ ಒಂಭತ್ತು ಜನ ವಿದ್ಯಾರ್ಥಿನಿಯರು ವಿವಿಧ ಜಾತಿ ಪಂಗಡಗಳಿಗೆ ಸೇರಿದವರಾಗಿದ್ದರು. ಆಗ ಮಹಿಳೆಯರ ಶಿಕ್ಷಣವೆಂದರೆ ಉಪೇಕ್ಷೆಯ ವಿಷಯವಾಗಿತ್ತು. ಮಹಿಳೆಯರು ಅಕ್ಷರ ಕಲಿತರೆ ಅವರು ಯಾರ್‍ಯಾರಿಗೋ ಪತ್ರ ಬರೆಯಬಹುದು ಮತ್ತು ಅವರೊಡನೆ ಸಂಬಂಧ ಬೆಳಸಬಹುದು, ಎಂಬ ನಂಬಿಕೆಯಿತ್ತು. ಹೆಂಗಸು ಶಿಕ್ಷಣ ಕಲಿತರೆ ಗಂಡನು ತಿನ್ನುವ ಆಹಾರದಲ್ಲಿ ಹುಳ ಬೀಳುತ್ತದೆ ಮತ್ತು ಅವನು ಅಕಾಲ ಮೃತ್ಯುವಿಗೀಡಾಗಬಹುದು, ಎಂಬ ಮೂಢನಂಬಿಕೆ ಆ ಕಾಲದಲ್ಲಿ ವ್ಯಾಪಕವಾಗಿತ್ತು.

ಇಂತಹ ಮೂಢ ಶಾಸ್ತ್ರ ಕಟ್ಟಲೆಗಳ ಗೊಂಡಾರಣ್ಯದ ಪುರುಷ ಸಾಮ್ರಾಜ್ಯದಲ್ಲಿ ಸ್ತ್ರೀಯೊಬ್ಬಳು ಏನನ್ನೇ ಸಾಧಿಸುವುದಕ್ಕೂ ವಿರೋಧ ಹೆಡೆಯುತ್ತುತ್ತಲೇ ಇರುತ್ತದೆ. ಅದನ್ನು ಹಿಮ್ಮೆಟ್ಟಿ ತಮ್ಮ ಗುರಿಯನ್ನು ಸಾಧಿಸಬೇಕೆಂದು ಬಯಸುವವರಿಗೆ ಬದುಕು ಹೂವಿನ ಹಾದಿಯಲ್ಲ. ಶಾಲೆಗೆಂದು ಮನೆ ಬಿಟ್ಟು ಹೊರಟ ಸಾವಿತ್ರಿಯ ಹಿಂದೆ ಕರ್ಮಠ ಬ್ರಾಹ್ಮಣರು ಗುಂಪುಗುಂಪಾಗಿ ಹಿಂಬಾಲಿಸುತ್ತಿದ್ದರು. ಅವಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು. ಅವಳ ಮೇಲೆ ಕೊಳೆತ ಟೊಮ್ಯಾಟೊ, ಸಗಣಿ ಮತ್ತು ಕಲ್ಲುಗಳನ್ನು ಎಸೆಯುತ್ತಿದ್ದರು. ಅಪಮಾನಿತಳಾದ ಸಾವಿತ್ರಿ ಹೆದರುತ್ತಲೇ ಶಾಲೆ ತಲುಪುತ್ತಿದ್ದಳು. ಎಷ್ಟೋ ವೇಳೆ ಈ ಶಾಲೆಯನ್ನು ಮುಚ್ಚಿಬಿಡಬೇಕೆಂದು ನಿರ್ಧರಿಸಿದ್ದು ಇದೆ. ಆದರೆ ಗಂಡನ ಅಭಯ ಹಸ್ತ ಅವಳು ಅಂತಹ ನಿರ್ಧಾರ ತೆಗೆದುಕೊಳ್ಳದಂತೆ ಮಾಡಿತು. ಪ್ರತಿದಿನ ಅವಳು ತನ್ನೊಂದಿಗೆ ಒಂದು ಹೆಚ್ಚಿನ ಸೀರೆಯನ್ನು ತೆಗೆದುಕೊಂಡು ಹೋಗುತ್ತಿದ್ದಳು. ಬೀದಿಯಲ್ಲಿ ಸಂಪ್ರದಾಯಸ್ಥ ಬ್ರಾಹ್ಮಣರು ಅವಳ ಮೇಲೆ ಗಲೀಜು ಎಸೆದಾಗ ಆ ಸೀರೆ ಬದಲಾಯಿಸಿ ಬೇರೊಂದು ಸೀರೆಯುಟ್ಟು ಬರುತ್ತಿದ್ದಳು. ಬಹಳ ದಿನಗಳ ಕಾಲ ಈ ಪದ್ಧತಿಯೇ ಮುಂದುವರಿಯಿತು. ಆದರೆ ಒಂದು ದಿನ ದುರಳನೊಬ್ಬನು ಅವಳ ಮೇಲೆ ಕೈಹಾಕಿ ಅನುಚಿತವಾಗಿ ವರ್ತಿಸುವ ದುಸ್ಸಾಹಸವನ್ನು ಮಾಡಿದ. ಕೂಡಲೇ ಸಾವಿತ್ರಿಯ ಕೈ ಅವನಿಗೆ ಕಪಾಳಮೋಕ್ಷ ಮಾಡಿತು. ಅದೇ ಕಡೆಯ ದಿನ. ಆ ನಂತರ ಆ ದುರುಳರ ಕಾಟ ಮುಂದುವರೆಯಲಿಲ್ಲ. ನಿಧಾನವಾಗಿ ಸಾವಿತ್ರಿ

ತನ್ನ ಸ್ಥಾನವನ್ನು ಕಾರ್ಯದ ಮಹತ್ವವನ್ನು ಸಮರ್ಥಿಸಿಕೊಂಡು ನೆಲೆಯೂರಿದಳು. ಆ ನಂತರ ಇಂತಹುದೇ ಇನ್ನು ಹಲವಾರು ಕನ್ಯಾಶಾಲೆಗಳನ್ನು ಪುಣೆಯ ಇತರ ಜಾಗಗಳಲ್ಲಿ ದಂಪತಿಗಳಿಬ್ಬರು ಆರಂಭಿಸಿದರು. ಪುಲೆ ದಂಪತಿಗಳ ಈ ಸೇವಾಕಾರ್ಯಕ್ಕೆ ಬ್ರಿಟಿಷ್ ಸರ್ಕಾರ ಅವರನ್ನು ಸನ್ಮಾನಿಸಿ ಗೌರವಿಸಿತು.

ಸಾವಿತ್ರಿ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವಲ್ಲದೆ ಅವಳ ಗಂಡನ ಇತರ ಸಾಮಾಜಿಕ ಹೋರಾಟಗಳಲ್ಲಿಯೂ ತನ್ನ ಕೈ ಜೋಡಿಸಿದಳು. ಮೇಲ್‌ಜಾತಿಯ ಜನ ಸಾರ್ವಜನಿಕ ಸ್ಥಳಗಳಲ್ಲಿ ಕೆಳಜಾತಿಯವರನ್ನು ಕೀಳಾಗಿ ಕಂಡು ಅಪಮಾನಿಸುವುದನ್ನು ಕಂಡು ಕೆಂಡಾಮಂಡಲವಾದ ಜ್ಯೋತಿಬಾ ತಾವೇ ಸ್ವತಃ ಶಾಸ್ತ್ರ ಗ್ರಂಥಗಳನ್ನೆಲ್ಲ ಅಭ್ಯಸಿಸಿ ಅವರ ರೀತಿ ನೀತಿಗಳನ್ನು ಪ್ರಶ್ನಿಸಿದರು. ಎಲ್ಲ ರೀತಿಯ ಅಸಮಾನತೆಯ ವಿರುದ್ಧವೂ ಎಲ್ಲ ಜಾತಿಗಳ ದೌರ್ಜನ್ಯದ ವಿರುದ್ಧವೂ ಪ್ರತಿಭಟಿಸಿದರು.

ಅಂದಿನ ದಿನಗಳಲ್ಲಿ ಚಿಕ್ಕ ವಯಸ್ಸಿಗೆ ಮದುವೆಯಾಗಿ ವಿಧವೆಯೂ ಆದ ಹೆಣ್ಣು ಮಕ್ಕಳ ದುಸ್ಥಿತಿಯ ಬಗ್ಗೆ ಮಮ್ಮಲ ಮರುಗಿದರು. ಒಮ್ಮೆ ನದಿಯ ದಂಡೆಯ ಮೇಲೆ ನಡೆಯುತ್ತಿದ್ದಾಗ ತನ್ನ ಜೀವನವನ್ನು ಕೊನೆಗಾಣಿಸಲೆಂದು ನೀರಿಗೆ ಬೀಳಲು ಹೋಗುತ್ತಿದ್ದ ವಿಧವಾ ಹೆಣ್ಣು ಮಗಳು ಕಾಶಿಬಾಯಿಯನ್ನು ಸಾಯದಂತೆ ತಡೆದು ರಕ್ಷಿಸಿ ಮನೆಗೆ ಕರೆದುಕೊಂಡು ಬಂದರು. ಗರ್ಭಿಣಿಯಾಗಿದ್ದ ಆ ವಿಧವಾ ಮಗಳಿಗೆ ಸಾಂತ್ವನ ಹೇಳಿ ಅವಳ ಮಗನನ್ನೇ ದತ್ತು ತೆಗೆದುಕೊಳ್ಳುವುದಾಗಿ ಆಶ್ವಾಸನೆ ನೀಡಿದ್ದೇ ಅಲ್ಲದೆ ಅವಳ ಮಗನನ್ನು ದತ್ತು ತೆಗೆದುಕೊಂಡು 'ಯಶವಂತ' ಎಂದು ಹೆಸರಿಟ್ಟು ಬೆಳೆಸಿದರು. ಮುಂದೆ ಈ ಬಾಲಕನೇ ವೈದ್ಯನಾದ.

ಈ ಪ್ರಕರಣದ ನಂತರ ಸಾವಿತ್ರಿ ಮತ್ತು ಜ್ಯೋತಿಬಾ, ಇಬ್ಬರೂ ವಿಧವೆಯರ ದುಸ್ಥಿತಿಗೆ ಮರುಗಿ ಅವರ ಬದುಕಿಗೆ ರಕ್ಷಣೆ ಕೊಡಲು 'ಬಾಲಹತ್ಯಾ ಪ್ರತಿಬಂಧಕ ಗೃಹ' ಎಂಬ ಪ್ರಸೂತಿ ಗೃಹವನ್ನು ತೆರೆದು ಬಲವಂತವಾಗಿ ವಿವಾಹದ ಚೌಕಟ್ಟಿನಾಚೆ ಗರ್ಭಿಣಿಯರಾದ ಮಹಿಳೆಯರಿಗೆ ಹೆರಿಗೆ ಮಾಡಿಸಲು ನೆರವಾದರು. ಅಷ್ಟೇ ಅಲ್ಲ ವಿಧವೆಯಾದಾಗ ಕೇಶಮುಂಡನ ಮಾಡುವ ಪದ್ಧತಿಯ ವಿರುದ್ಧವೂ ಪ್ರತಿಭಟಿಸಿದರು. ಕ್ಷೌರಿಕರನ್ನು ಸಂಘಟಿಸಿ ಅವರು ಇಂತಹ ಬಾಲ ವಿಧವೆಯರಿಗೆ ಕೇಶಮುಂಡನ ಮಾಡಕೂಡದೆಂದು ಒತ್ತಾಯಿಸಿ ಆಗ್ರಹಿಸಿದರು.

ಅಸ್ಪೃಶ್ಯರಿಗೆ ಸಾರ್ವಜನಿಕ ನೀರನ್ನು ಮುಟ್ಟದಂತೆ ತಡೆಯುವ ನೀತಿಯ ವಿರುದ್ಧವೂ ಪುಲೆ ದಂಪತಿಗಳು ಪ್ರತಿಭಟಿಸಿದರು. ತಮ್ಮ ಮನೆಯಲ್ಲಿಯೇ ಒಂದು ದೊಡ್ಡ ನೀರಿನ ತೊಟ್ಟಿಯನ್ನು ಕಟ್ಟಿ ಅಸ್ಪೃಶ್ಯರಿಗೆ ತಾವೇ ಕುಡಿಯುವ ನೀರು ಒದಗಿಸಿದರು. ಅವರ ಈ ಕಾರ್ಯವನ್ನು ಖಂಡಿಸಿ ಸಾವಿತ್ರಿಬಾಯಿಯ ಸೋದರ ಅವರಿಗೊಂದು ಪತ್ರ ಬರೆದ. ಅದಕ್ಕೆ ಉತ್ತರಿಸುತ್ತಾ ಸಾವಿತ್ರಿಬಾಯಿ ಪ್ರತಿಕ್ರಿಯಿಸಿದ್ದು ಹೀಗೆ :- ''ನನಗೆ ನನ್ನ ಗಂಡನ ಚಟುವಟಿಕೆಗಳ ಬಗ್ಗೆ ಹೆಮ್ಮೆಯಿದೆ. ಅದನ್ನು ಪ್ರಶ್ನಿಸಲು ನಿನಗೇನು ಅರ್ಹತೆಯಿದೆ? ನೀವು ನಿಮ್ಮ ಮನೆಯಲ್ಲಿ ನಾಯಿ, ಬೆಕ್ಕುಗಳನ್ನು ತೊಡೆಯ ಮೇಲಿಟ್ಟು ಆನಂದಿಸುವಿರಿ. ಆದರೆ ಅಸ್ಪೃಶ್ಯರ ನೆರಳು ಬಿದ್ದರೂ ಮೈಲಿಗೆಯಾದಂತೆ ಭಾವಿಸುವಿರಿ. ಆದರೆ ನನ್ನ ಗಂಡ ದೇವರಂಥ ಮನುಷ್ಯ. ಅವರು ಎಲ್ಲ ಮಾನವ ಜೀವಿಗಳನ್ನು ಸಮಾನವಾಗಿ ಭಾವಿಸುತ್ತಾರೆ''.

ಜ್ಯೋತಿ ಬಾ ಪುಲೆ ಸಮಾಜದಲ್ಲಿ ಅಸ್ಪೃಶ್ಯರ ಅಪಮಾನಕ್ಕೊಳಗಾದವರ ವಿಮೋಚನೆಗಾಗಿಯೇ 'ಸತ್ಯಶೋಧಕ ಸಮಾಜ'ವನ್ನು ಸ್ಥಾಪಿಸಿ ಅವಿರತವಾಗಿ ಸಮಾಜ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರ ಈ ಕಾರ್ಯದಲ್ಲಿ ಪತ್ನಿ ಸಾವಿತ್ರಿಬಾಯಿಯೂ ಸಮಸಮವಾಗಿ ತಮ್ಮನ್ನು ತೊಡಗಿಸಿಕೊಂಡು ಇಡೀ ಸಮಾಜದ ಒಳಿತಿಗಾಗಿ ತಮ್ಮ ಕಾರ್ಯಕ್ಷೇತ್ರವನ್ನು ಮೀಸಲಿಟ್ಟರು. 1890ರಲ್ಲಿ ಜ್ಯೋತಿ ಬಾ ಪುಲೆ ನಿಧನ ಹೊಂದಿದ ನಂತರ ಸಾವಿತ್ರಿ ಬಾಯಿಯವರು 'ಸತ್ಯಶೋಧಕ ಸಮಾಜ'ದ ಪೂರ್ಣ ಜವಾಬ್ದಾರಿಯನ್ನು ಕೈಗೆತ್ತಿಕೊಂಡರು. ಸಭೆಗಳನ್ನು ನಡೆಸುತ್ತಾ ಕಾರ್ಯಕರ್ತರನ್ನು ಹುರಿದುಂಬಿಸುತ್ತಾ ತಾನು ಕೈಗೊಂಡ ಜವಾಬ್ದಾರಿಗೆ ನ್ಯಾಯ ಒದಗಿಸಿದರು.

ಒಮ್ಮೆ ಪುಣೆಯಲ್ಲೆಲ್ಲಾ ಪ್ಲೇಗು ಆವರಿಸಿತ್ತು. ಆ ರೋಗದಿಂದ ಪೀಡಿತರಾದವರ ಮಧ್ಯೆ ಅವಿರತವಾಗಿ ಸೇವೆ ನಡೆಸುತ್ತಾ, ಮಕ್ಕಳಿಗಾಗಿ ವಿಶೇಷ ಕ್ಯಾಂಪುಗಳನ್ನು ಏರ್ಪಡಿಸಿದರು. ಈ ವ್ಯಾಧಿಯು ಹಬ್ಬಿದ್ದ ಸಂದರ್ಭದಲ್ಲಿ ದಿನಕ್ಕೆ ಎರಡು ಸಾವಿರ ಮಕ್ಕಳಿಗೆ ಆಹಾರದ ವ್ಯವಸ್ಥೆ ಮಾಡಲಾಗಿತ್ತೆಂದು ಹೇಳುತ್ತಾರೆ. ಆದರೆ ವಿಪರ್ಯಾಸವೆಂದರೆ, ಈ ರೋಗಿಗಳಿಗಾಗಿ ದುಡಿಯುತ್ತಲೇ ತಾನೂ ಆ ರೋಗಕ್ಕೆ ಬಲಿಯಾಗಿ 1897ರ ಮಾರ್ಚ್ 10ರಂದು ಸಾವಿತ್ರಿಬಾಯಿ ಕೊನೆಯುಸಿರೆಳೆದರು.

ಸಾವಿತ್ರಿಬಾಯಿ ಕೇವಲ ಸಾಮಾಜಿಕ ಕಾರ್ಯಕರ್ತೆ ಮಾತ್ರವಾಗಿರದೆ ಕವಯತ್ರಿಯಾಗಿದ್ದರು. ವೈಚಾರಿಕ ಸಾಹಿತ್ಯವನ್ನು ರಚಿಸಿದ್ದಾರೆ. ಪಂಡಿತ ರಮಾಬಾಯಿ ಜನಿಸುವುದಕ್ಕಿಂತ ಹತ್ತು ವರ್ಷ ಮುಂಚೆಯೇ ಹಿಂದುಳಿದ ಮಾಲಿ ಕುಟುಂಬದಲ್ಲ ಜನಿಸಿದ ಸಾವಿತ್ರಿಬಾಯಿ ಅತ್ಯಂತ ಕ್ರಾಂತಿಕಾರಕವಾಗಿ ಬಾಳಿ, ತಮ್ಮ ವಿಚಾರವನ್ನು ಶಾಬ್ದಿಕವಾಗಿ ಅಭಿವ್ಯಕ್ತಿಸಿದ್ದಾರೆ. ಅವರು ಮೊದಲ ಅಧ್ಯಾಪಕಿಯಾಗಿ, ಶಿಕ್ಷಣ ತಜ್ಞಳಾಗಿ, ಮೊದಲ ಕವಯಿತ್ರಿಯಾಗಿ, ಮಹಿಳಾ ಹೋರಾಟಗಾರ್ತಿಯಾಗಿ ಹಲವಾರು ಪ್ರಥಮಗಳನ್ನು ಹಾಡಿದ್ದಾರೆ. ಸಾವಿತ್ರಿಬಾಯಿ ಮರಾಠಿಯಲ್ಲಿ ಕಾವ್ಯಫುಲೆ (1934) ಮತ್ತು ಭಾವನ ಕಾಶಿಸುಭೋಧ್ ರತ್ನಾಕರ್ (1982) ಎಂಬ ಎರಡು ಸಾಹಿತ್ಯಕೃತಿಗಳನ್ನೂ ರಚಿಸಿದ್ದಾರೆ. ಮಹಾರಾಷ್ಟ್ರದ ಈ ಸ್ತ್ರೀ ರತ್ನ ಇಂದಿಗೂ ಮಹಿಳಾ ವಿಮೋಚನೆಗೊಂದು ಆದರ್ಶ ಮಾದರಿ.

– ಆಶಾ

ಸಾಮಾಜಿಕ ನ್ಯಾಯ ಇಂದಿನ ಅಗತ್ಯ

- ಕಲ್ಪನಾ ಶರ್ಮ

ಗುಜರಾತ್‌ನ ಚುನಾವಣೆಯ ಫಲಿತಾಂಶ ಹೊರಬೀಳುವುದಕ್ಕೆ ಮುಂಚೆ ಇಡೀ ದೇಶವೇ ಕಾತುರದಿಂದ ಉಸಿರು ಬಿಗಿಹಿಡಿದು ಕಾಯುತ್ತಿತ್ತು. ಈ ಫಲಿತಾಂಶದಿಂದಲೇ ಇಡೀ ದೇಶದ ಭವಿಷ್ಯವೇ ನಿರ್ಧರಿಸಿಬಿಡುತ್ತದೆಂದು ಜನ ಭಾವಿಸಿದ್ದುಂಟು. ಯಾರು ಸೋತರೂ ಯಾರು ಗೆದ್ದರೂ ಗುಜರಾತಿನ ಸಹಸ್ರಾರು ಜನ ಸಮುದಾಯದ ವಾಸ್ತವಿಕ ಅನುಭವವೇ ಬೇರೆಯಾಗಿತ್ತು. ಅವರ ನೋವಿಗೆ ಈ ಚುನಾವಣೆಯಲ್ಲಿ ಗೆದ್ದ, ಸೋತ ಪಕ್ಷಗಳ್ಯಾವುವೂ ಸ್ಪಂದಿಸಲೇ ಇಲ್ಲ. ಅವರಿಗೆ ಈ ತಕ್ಷಣಕ್ಕೆ ಬೇಕಿದ್ದು ಸಾಮಾಜಿಕ ನ್ಯಾಯ, ಬದುಕುವ ಹಕ್ಕು, ಆಹಾರ, ನೀರು, ದುಡಿಯಲು ಕೆಲಸ. ಚುನಾವಣೆಯ ಸಂದರ್ಭದಲ್ಲಿ ಹರಿದು ಬಂದ ಆಶ್ವಾಸನೆಗಳ ಮಹಾಪೂರ ಗುಜರಾತಿನ ಜನತೆಯನ್ನು ಮುಳುಗೇಳಿಸಿತಾದರೂ ಯಾರೊಬ್ಬರೂ ಈ ಮೂಲಭೂತ ಅಗತ್ಯದ ಬಗ್ಗೆ ಸೊಲ್ಲೆತ್ತಲಿಲ್ಲ. ವಿಶೇಷವಾಗಿ ಇಲ್ಲಿನ ಮಹಿಳೆಯರಿಗೆ ಅದರಲ್ಲೂ ಮುಸ್ಲಿಂ ಮಹಿಳೆಯರಿಗೆ ಈ ಚುನಾವಣೆಯ ಆಶ್ವಾಸನೆಗಳು ಯಾವುದೇ ರೀತಿಯ ಸಾಂತ್ವನವನ್ನೂ ನೀಡಲಿಲ್ಲ. ಒಂಭತ್ತು ತಿಂಗಳ ಹಿಂದೆ ಅವರ ಸೋದರಿಯರು ಅನುಭವಿಸಿದ ದೌರ್ಜನ್ಯ, ಹಿಂಸೆಯ ಬಗ್ಗೆ ಯಾವುದೇ ರೀತಿಯ ಪಶ್ಚಾತ್ತಾಪ, ಸಾಂತ್ವನದ ಮಾತುಗಳು ಇವರ ಭಾಷಣಗಳಲ್ಲಿ ಮೂಡಿ ಬರಲಿಲ್ಲ.

ಆದ್ದರಿಂದಲೇ ಇಂದು ಗುಜರಾತ್‌ನಲ್ಲಿ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದಿದ್ದರೂ ಬೆಳಕೇ ಕಾಣದ ಸಾವಿರಾರು ಕುಟುಂಬಗಳ ನೋವಿನ ಕಡಲು ಇಂಗುವ ಸಾಧ್ಯತೆಯೇ ಕಡಿಮೆ. ಒಂಭತ್ತು ತಿಂಗಳ ಹಿಂದೆ ನಡೆದ ಘಟನೆಗಳ ದುಸ್ವಪ್ನ ಇನ್ನೂ ಆ ಜನತೆಯನ್ನು ಕಾಡುತ್ತಲೇ ಇದೆ. ''ಇದರಲ್ಲಿ ನಮ್ಮದೇನು ತಪ್ಪು?'' ಎಂದು ಪ್ರಶ್ನಿಸುವ ನರೋಡ ಪಾಟಿಯಾದ ಕುಲ್‌ಸಮ್ ಬಾನೊ, ತನ್ನ ಮುಂದೆ ಕಂಡ ದೃಶ್ಯವನ್ನು ನಮ್ಮೊಂದಿಗೆ ಬಿಚ್ಚಿಟ್ಟಳು - ಅವಳ ಏಳು ವರ್ಷದ ಮಗಳನ್ನು ಅವಳ ಕಣ್ಣೆದುರಿಗೇ ಹೇಗೆ ಘಾತುಕರು ಕೊಂದು ಬಿಟ್ಟರು. ಅವಳ ಪ್ರಶ್ನೆಗಳಿಗೆ ನಮ್ಮಲ್ಲೂ ಉತ್ತರವಿಲ್ಲ. ಕುಲ್‌ಸಮ್ ಬಾನೋ ಒಬ್ಬಳೇ ಅಲ್ಲ, ತನ್ನ ಗಂಡನನ್ನು ಕಳೆದುಕೊಂಡ ಜುಬೇದಾ ಬಾನೋ, ತನ್ನ ಕುಟುಂಬದ ಹನ್ನೊಂದು ಮಂದಿ ಸದಸ್ಯರಲ್ಲಿ ಎಂಟು ಜನರನ್ನು ಕಳೆದುಕೊಂಡ ಬೀಬಿ ಬಾನೋ - ಎಲ್ಲರಿಗೂ ಬದುಕುವ ಒಂದೊಂದು ದಿನವೂ ಪಶ್ನಾರ್ಥಕವೇ? - ಅವರ ಈ ಪ್ರಶ್ನೆಗಳಿಗೆ ಯಾರ ಬಳಿಯೂ ಉತ್ತರವಿಲ್ಲ. ಆದರೂ ಈ ಮಹಿಳೆಯರು ಬದುಕಿದ್ದಾರೆ. ಇವರಲ್ಲದೆ ನೂರಾರು ಲೆಕ್ಕವಿಲ್ಲದಷ್ಟು ಮಂದಿ ಜೀವಂತ ಶವವಾಗಿ ಉಸಿರೆಳೆಯುತ್ತಿದ್ದಾರೆ. ಅತ್ಯಾಚಾರಕ್ಕೆ ಒಳಗಾದ ಹೆಂಗಸರು, ಕಣ್ಣೆದುರಿಗೆ ತಮ್ಮ ಆಪ್ತರು ಅತ್ಯಾಚಾರಕ್ಕೆ, ಬೆಂಕಿಗೆ ಆಹುತಿಯಾದದ್ದನ್ನು ಕಂಡವರು ದಿಗ್‌ಭ್ರಾಂತರಾಗಿದ್ದಾರೆ. ಈ ಜನ ಸಮೂಹಕ್ಕೆ ಅಧಿಕಾರದ ಬದಲಾವಣೆಯೆನ್ನುವುದು ಯಾವ ಅರ್ಥವನ್ನು ಕೊಟ್ಟೀತು? ಈ ಸಂತ್ರಸ್ಥರ ಬದುಕನ್ನು ರೂಪಿಸುವವರು ಯಾರು? ಈ ಗುಜರಾತಿನ ಮಹಿಳೆಯರಿಗೆ ಅವರ ಮೇಲೆ ದೌರ್ಜನ್ಯವೆಸಗಿದವರು ಅವರ ಕಣ್ಣ ಮುಂದೆಯೇ ಶಿಕ್ಷೆ ಅನುಭವಿಸುವಂತಾದರೆ ಸ್ವಲ್ಪವಾದರೂ, ಮಾನಸಿಕ ನೆಮ್ಮದಿ ಮೂಡೀತು. ಹಾಗೆಯೇ ಅವರ ಬದುಕುಗೊಂದು ಪರ್ಯಾಯ ಜೀವನ ಮಾರ್ಗವನ್ನು ಕಲ್ಪಿಸಿಕೊಡಲು ಸಾಧ್ಯವಾಗಿದ್ದರೆ ಅವರ ನೊಂದ ಮನಗಳಿಗೆ ಸಾಂತ್ವನವಾದರೂ ದೊರಕೀತು. ಗುಜರಾತಿನಲ್ಲಿ ಅಧಿಕಾರದ ಗದ್ದುಗೆಯೇರಲು ಸ್ಪರ್ಧಿಸಿದ ಯಾರಿಂದಲೂ ಇಂತಹ ಸಾಂತ್ವನ ನಿರೀಕ್ಷಿಸುವುದು ಮೂರ್ಖತನವೇ ಆದೀತು.

ಗುಜರಾತಿನ ಇಂದಿನ ಸಂಕಷ್ಟದ ಸಮಯದಲ್ಲಿ ಭರವಸೆಯ ಕಿರಣ ಮೂಡುವುದು ಬೇರೆಯೇ ಮೂಲೆಗಳಿಂದ. ಪೂನಾದ ಬ್ರಾಹ್ಮಣ ಹುಡುಗಿ ಹೇಮ ಅಹಮದಾಬಾದ್‌ನ ಪಠಾನ್‌ನನ್ನು ಮೆಚ್ಚಿ ವರಿಸಿದಳು. ವಿಷಯ ತಿಳಿದ ಅವಳ ಹೆತ್ತವರು ಅವಳನ್ನು ಮನೆಯಿಂದ ಹೊರಹಾಕಿದರು. ತನ್ನೂರನ್ನು ಬಿಟ್ಟು ಅಹಮದಾಬಾದಿಗೆ ಬಂದ ಹೇಮ ನಜೀಮಾಬಾನು ಪಠಾನ್ ಆದಳು. ತನ್ನ ಗಂಡ ಮತ್ತು ಮಗುವಿನೊಂದಿಗೆ ಬದುಕುತ್ತಿದ್ದಳು. ಮೊದಲಿಗೆ ಅವಳ ಗಂಡನ ಮನೆಯವರು ಅವರನ್ನು ತಿರಸ್ಕರಿಸಿದ್ದುಂಟು. ಆದರೆ ಇತ್ತೀಚಿನ ಹತ್ಯಾಕಾಂಡದಲ್ಲಿ ಗಂಡ ಮಡಿದಾಗ ಅತ್ತೆಯ ಮನೆಯವರು ಅವಳನ್ನು ಆದರಿಸಿ ಕರೆದುಕೊಂಡರು. ಹೆತ್ತವರು ಈಗಲೂ ಅವಳನ್ನು ಒಪ್ಪಿಕೊಳ್ಳಲು ತಿರಸ್ಕರಿಸಿದರೂ ನಜೀಮಾ ಎದೆಗುಂದಲಿಲ್ಲ. ತನ್ನೆದೆಯ ನೋವನ್ನು ಮುಚ್ಚಿಟ್ಟುಕೊಂಡು ತನ್ನಂತಹ ಹತಭಾಗಿನಿಯರ ಮತ್ತು ನೊಂದವರ ಬಾಳಿನ ಪುನಶ್ಚೇತನಕ್ಕಾಗಿ ದುಡಿಯುತ್ತಿದ್ದಾಳೆ.

ಗುಜರಾತಿನ ಚುನಾವಣೆ ನಡೆಯುವುದಕ್ಕೆ ಮೂರು ದಿನಗಳಿಗೆ ಮುಂಚೆ ಅಹಮದಾಬಾದಿನ ಆಕರ್ಷಕ ಟ್ಯಾಗೋರ್ ಹಾಲ್‌ನಲ್ಲಿ ಸಭೆಯೊಂದು ನಡೆದಿತ್ತು. ಅದು ಮಹಿಳೆಯರ ಸಮಾವೇಶ. ಎಲ್ಲ ಜಾತಿ, ವರ್ಗ, ವಯೋಮಾನ, ಅಭಿರುಚಿಯ ಮಹಿಳಾ ಸಮುದಾಯವೇ ಅಲ್ಲಿ ಕಿಕ್ಕಿರಿದು ನೆರೆದಿತ್ತು, ಅಲ್ಲಿ

ಮಹಿಳೆಯರು ಒಟ್ಟಾಗಿ ಹಾಡುತ್ತಿದ್ದರು; ಅಳುತ್ತಿದ್ದರು; ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಘೋಷಣೆಗಳನ್ನು ಕೂಗುತ್ತಿದ್ದರು. ಕಳೆದ ಮಾರ್ಚ್- ಏಪ್ರಿಲ್ ತಿಂಗಳಿನಲ್ಲಿ ಗುಜರಾತಿನಲ್ಲಿ ನಡೆದ ಹತ್ಯಾಕಾಂಡದ ಕರಿನೆರಳ ಕಾರ್ಮೋಡವನ್ನು ಹೊಡೆದೋಡಿಸುವ ಶಕ್ತಿಯೇನಾದರೂ ಇರುವುದಾದರೆ ಅದು ಈ ಮಹಿಳೆಯರ ಉತ್ಸಾಹಕ್ಕೆ ಮಾತ್ರ ಸಾಧ್ಯ. ಅದು ಒಂದು ದಿನದ ಮಹಿಳಾ ಸಮಾವೇಶವಾಗಿತ್ತು. ವಿವಿಧ ಮಹಿಳಾ ಸಂಘಟನೆಗಳು ಒಗ್ಗೂಡಿ ಕೋಮು ಹಿಂಸೆ, ಪುನರ್ವಸತಿ, ಪರಿಸರ, ರಾಜಕೀಯ ಅಧಿಕಾರ - ಈ ವಿಷಯಗಳನ್ನು ಕುರಿತು ಅಲ್ಲಿ ಚರ್ಚಿಸಿದರು. ಈ ಸಮ್ಮೇಳನಕ್ಕೆ ಸುತ್ತ ಮುತ್ತಲಿನ ಹಳ್ಳಿಗಳಿಂದ, ನಗರಗಳಿಂದ ಹೆಂಗಸರು ಉತ್ಸಾಹದಿಂದ ಆಗಮಿಸಿದ್ದರು. ಈ ಹೆಂಗಸರು ಬೇರೆಯವರ ನೋವಿಗೆ ಸ್ವಯಂ ಸ್ಫೂರ್ತಿಯಿಂದ ಸ್ಪಂದಿಸಿದ ರೀತಿ ನಿಜಕ್ಕೂ ಅಚ್ಚರಿ ಹುಟ್ಟಿಸಿತು. ಅವರ ಚರ್ಚೆಗಳು ತೆಗೆದುಕೊಂಡ ನಿರ್ಣಯಗಳು ವಿವೇಚನಾಯುತವಾಗಿತ್ತು. ಇನ್ನು ಮುಂದೆ ಯಾವುದೇ ಒಂದು ಸಮುದಾಯದ ಮೇಲೆ ಹಲ್ಲೆ ನಡೆದರೆ ಆದರ ಬಿಸಿ ಇಡೀ ಸಮಾಜಕ್ಕೆ ತಾಗುವುದರಿಂದ ಅಂತಹ ಕೃತ್ಯಗಳು ನಡೆಯದಂತೆ ಸಮಾಜದ ಎಲ್ಲ ಸಮುದಾಯದ ಮಹಿಳೆಯರು ಒಟ್ಟಾಗಿ ಕ್ರಿಯಾಶೀಲರಾಗಬೇಕೆಂಬ ಸಂಕಲ್ಪ ತೊಟ್ಟರು. ದಲಿತ ಮಹಿಳೆಯೊಬ್ಬಳು ಮಾತನಾಡಿ, ''ನಮ್ಮ ಮಕ್ಕಳು ಮತ್ತು ಗಂಡಸರು ಇಂತಹ ದೊಂಬಿ, ಲೂಟಿಯಲ್ಲಿ ಭಾಗವಹಿಸದಂತೆ ತಡೆಯುತ್ತೇವೆ.'' ಎಂದಳು. ಮುಸ್ಲಿಂರನ್ನು ಸದೆಬಡಿಯಲು ದಲಿತರನ್ನು, ಆದಿವಾಸಿಗಳನ್ನು ಬಳಸಿಕೊಂಡದ್ದನ್ನು ಈ ಸಂದರ್ಭದಲ್ಲಿ ಅವರೆಲ್ಲಾ ಖಂಡಿಸಿದರು.

ಇಂತಹ ಸಾಂತ್ವನದ, ಸೌಹಾರ್ದ ಸ್ಪರ್ಶ ಇಂದಿನ ಗುಜರಾತಿನಲ್ಲಿ ನೊಂದವರಿಗೆ ಅಗತ್ಯವಾಗಿ ಬೇಕಿದೆ. ಒಬ್ಬರ ನೋವನ್ನು ಮತ್ತೊಬ್ಬರು ಅರ್ಥಮಾಡಿಕೊಳ್ಳಬಲ್ಲ ಸ್ಪಂದನ ಶೀಲತೆಯ ಆಗತ್ಯವಿದೆ. ಇದಕ್ಕಿಂತಲೂ ಹೆಚ್ಚಾಗಿ ಅಪರಾಧಿಗಳಿಗೆ ಶಿಕ್ಷೆಯಾಗಿ ಪ್ರಾಯಶ್ಚಿತ್ತವಾಗಬೇಕಾದ ಅಗತ್ಯವಿದೆ ಆಗ ಮಾತ್ರ ನೊಂದ ಮಹಿಳಾ ಸಮುದಾಯ ನ್ಯಾಯಕ್ಕಾಗಿ ಮತ ಚಲಾಯಿಸಬಹುದೇ ಹೊರತು ನೋವನ್ನು ಮತಗಳಿಕೆಯ ಸೂತ್ರವನ್ನಾಗಿ ಮಾಡಿಕೊಂಡಾಗಲ್ಲ.

ಕೃಪೆ: 'ದಿ ಹಿಂದೂ'

RNI No. 45577/88

"Achala" 108, Skyline Surabhi,
14 - P, Vidyapeeta Road,
BSK III Stage,
Bangalore - 560 085

To :

Smt/Sri

CPMG/KA/BG-8/2002
Book-Post/News Letter